ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 101 RNI Number : KNKAN/25/A2770 20-04-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :101 ರಾಯಚೂರು 20-04-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ಭಾಷಣದಲ್ಲಿ ಕಾಂಗ್ರೆಸ್ ಅನ್ನು 59 ಬಾರಿ ಪ್ರಸ್ತಾಪಿಸಿದ ಮೋದಿ: ಖರ್ಗೆ ಟೀಕೆ

ನವದೆಹಲಿ,ಏ.19-

ವಿಪಕ್ಷಗಳು ವಿರೋಧಿಸುತ್ತಾ ಬಂದಿರುವ ಕ್ಷೇತ್ರ ಮರುವಿಂಗಡಣೆಯನ್ನು ಮಹಿಳಾ ಮೀಸಲಾತಿ ಮಸೂದೆಯೊಂದಿಗೆ ಜೋಡಿಸಿದ ಕಾರಣದಿಂದಾಗಿ ಲೋಕಸಭೆಯಲ್ಲಿ ಮಸೂದೆಯು ವಿಫಲಗೊಂಡಿದೆ. ಈ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ದೇಶವನ್ನುದ್ದೇಶಿಸಿ ಮಾತನಾಡಿದ್ದಾರೆ. ಈ ಭಾಷಣವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ. ''ಪ್ರಧಾನಿ ಮೋದಿ ಭಾಷಣದಲ್ಲಿ ಮಹಿಳೆಯರನ್ನು ಉಲ್ಲೇಖಿಸುವುದಕ್ಕಿಂತ ಅಧಿಕ ಕಾಂಗ್ರೆಸ್ ಅನ್ನು ಉಲ್ಲೇಖಿಸಿದ್ದಾರೆ. ಭಾಷಣದಲ್ಲಿ ಕಾಂಗ್ರೆಸ್ ಅನ್ನು 59 ಬಾರಿ ಪ್ರಸ್ತಾಪಿಸಿದ್ದಾರೆ'' ಎಂದು ಹೇಳಿದ್ದಾರೆ.

ಕ್ಷೇತ್ರ ಮರುವಿಂಗಡಣೆಯೊಂದಿಗೆ ಜೋಡಿಸಲಾದ ಮಹಿಳಾ ಮೀಸಲಾತಿ ಮಸೂದೆಯು ಅಗತ್ಯವಿದ್ದ ಮೂರನೇ ಎರಡರಷ್ಟು ಬಹುಮತ ಪಡೆಯಲು ವಿಫಲವಾಗಿದೆ. ಮಸೂದೆಯ ಪರವಾಗಿ 298 ಮತಗಳು ಬಂದರೆ, ವಿರುದ್ಧವಾಗಿ 230 ಮತಗಳು ಬಿದ್ದವು. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ವಿಪಕ್ಷಗಳನ್ನು ಟೀಕಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ನಿನ್ನೆ ದೇಶವನ್ನುದ್ದೇಶಿಸಿ ಮಾತನಾಡಿದ್ದಾರೆ.

ಈ ಬಗ್ಗೆ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಖರ್ಗೆ, ''ಕಳೆದ 12 ವರ್ಷಗಳಿಂದ ಅರ್ಥಪೂರ್ಣವಾದ ಯಾವುದೇ ಕಾರ್ಯವನ್ನು ಮಾಡದ ಹತಾಶ ಪ್ರಧಾನಿ ನರೇಂದ್ರ ಮೋದಿ ದೇಶವನ್ನುದ್ದೇಶಿಸಿ ಅಧಿಕೃತ ಭಾಷಣ ಮಾಡಿದ್ದಾರೆ. ಆದರೆ ಈ ಭಾಷಣ ಬರೀ ಕೆಸರೆರಚಾಟ ಮತ್ತು ಸಂಪೂರ್ಣ ಸುಳ್ಳುಗಳಿಂದ ತುಂಬಿದ ರಾಜಕೀಯ ಭಾಷಣ'' ಎಂದು ಹೇಳಿದ್ದಾರೆ.



''ಮಾದರಿ ನೀತಿ ಸಂಹಿತೆ ಈಗಾಗಲೇ ಜಾರಿಯಲ್ಲಿದೆ. ಆದರೆ ಎರಡು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳಿಗೆ ಮುಂಚಿತವಾಗಿ ಪ್ರಧಾನಿ ಅಧಿಕೃತ ಆಡಳಿತದ ದುರುಪಯೋಗ ಮಾಡಿಕೊಂಡಿದ್ದಾರೆ. ಇದು ಸ್ಪಷ್ಟವಾಗಿದೆ. ಇದು ಪ್ರಜಾಪ್ರಭುತ್ವ ಮತ್ತು ಭಾರತದ ಸಂವಿಧಾನದ ವಿಡಂಬನೆಯಾಗಿದೆ'' ಎಂದರು.

''ಕಾಂಗ್ರೆಸ್ ಯಾವಾಗಲೂ ಮಹಿಳಾ ಮೀಸಲಾತಿಯನ್ನು ಬೆಂಬಲಿಸಿದೆ. 2010ರಲ್ಲಿ ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಿದ ಪಕ್ಷ ನಮ್ಮದು. ಆದ್ದರಿಂದ ಅದು ರದ್ದಾಗಬಾರದು. ಬಿಜೆಪಿಗೆ ಆ ಮಸೂದೆಯನ್ನು ಲೋಕಸಭೆಯಲ್ಲಿ ಅಂಗೀಕರಿಸಲು ಸಾಧ್ಯವಾಗಲಿಲ್ಲ. 2023ರಲ್ಲಿ ಮತ್ತೊಂದು ಮಸೂದೆಯನ್ನು ತಂದರು. ಕಾಂಗ್ರೆಸ್ ಪಕ್ಷ ಅದನ್ನೂ ಬೆಂಬಲಿಸಿತು'' ಎಂದು ತಿಳಿಸಿದ್ದಾರೆ.

''ಆ ಮಸೂದೆ ಇನ್ನೂ ಅಸ್ತಿತ್ವದಲ್ಲಿದೆ. ಬಿಜೆಪಿ ತನ್ನದೇ ಆದ ಮಸೂದೆಯನ್ನು ಜಾರಿಗೆ ತರಲು 3 ವರ್ಷಗಳನ್ನು ತೆಗೆದುಕೊಂಡಿತು ಎಂಬುದು ಭಾರತದ ನಾರಿ ಶಕ್ತಿಗೆ ಅವರ ಬದ್ಧತೆ ಎಷ್ಟಿದೆ ಎಂಬುದನ್ನು ತೋರಿಸುತ್ತದೆ! ಮೋದಿಜಿ ದೇಶಕ್ಕೆ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು'' ಎಂದು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜನಸಂಖ್ಯೆಯ ಆಧಾರದಲ್ಲಿ ನಡೆಯುವ ಕ್ಷೇತ್ರ ಮರುವಿಂಗಡಣೆಗೆ ದಕ್ಷಿಣ ಭಾರತದ ರಾಜ್ಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿದ ಕರ್ನಾಟಕ, ತಮಿಳುನಾಡು ಮತ್ತು ಕೇರಳದಂತಹ ದಕ್ಷಿಣ ರಾಜ್ಯಗಳ ಲೋಕಸಭಾ ಸ್ಥಾನಗಳ ಸಂಖ್ಯೆ ಕಡಿಮೆಯಾಗುವ ಭೀತಿ ಉಂಟಾಗಿದೆ. ವಿರೋಧವಿರುವ ಈ ಮಸೂದೆಯ ಜತೆಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಜೋಡಿಸಿ ಮಂಡಿಸುವ ಕೇಂದ್ರದ ನಿಲುವಿಗೆ ವಿರೋಧ ಪಕ್ಷಗಳ ತೀವ್ರ ವಿರೋಧ ವ್ಯಕ್ತಪಡಿಸಿತ್ತು.

ಈಗ ಕ್ಷೇತ್ರ ಮರುವಿಂಗಡಣೆಯೊಂದಿಗೆ ಜೋಡಿಸಿದ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಿದರೆ ಕ್ಷೇತ್ರ ಮರುವಿಂಗಡಣೆಯನ್ನೂ ಅಂಗೀಕರಿಸಿದಂತೆ. ಈ ಕಾರಣದಿಂದಾಗಿ ವಿಪಕ್ಷಗಳು ಈ ಸಂವಿಧಾನ ತಿದ್ದುಪಡಿ ವಿರುದ್ಧವಾಗಿ ನಿಂತಿತು. ಚುನಾವಣಾ ಸಮಯದಲ್ಲಿ ಲಾಭಕ್ಕಾಗಿಯೇ ಈ ತಂತ್ರ ರೂಪಿಸಿದ ಆಡಳಿತಾರೂಢ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಈಗ ವಿಪಕ್ಷಗಳನ್ನು ಮಹಿಳಾ ವಿರೋಧಿ ಎಂದು ಬಿಂಬಿಸುವ ಯತ್ನ ಮಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಈ ನಿಟ್ಟಿನಲ್ಲಿಯೇ ಇಂದು ದೇಶವನ್ನುದ್ದೇಶಿಸಿ ಭಾಷಣ ಮಾಡಿದ್ದಾರೆ.

ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಒಗ್ಗಟ್ಟಿನ ಹೋರಾಟ ಅಗತ್ಯ : ಶಾಸಕ ಬಸನಗೌಡ ದದ್ದಲ್

ರಾಯಚೂರು,ಏ.19-

ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದ ತಾಲೂಕುಗಳ ಅಭಿವೃದ್ಧಿಗಾಗಿ ರಾಜಕೀಯ ಭೇದಾಭೇದಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕಾಗಿದೆ ಎಂದು ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಹೇಳಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರ ಸಂಘಟನೆ ವತಿಯಿಂದ ಆಯೋಜಿಸಿದ್ದ ಪ್ರಾದೇಶಿಕ ಅಸಮಾನತೆ ಗೋವಿಂದರಾವ್ ಸಮಿತಿ ವರದಿ: ಸಾಧ್ಯತೆಗಳು ಮತ್ತು ಸವಾಲುಗಳು ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಪ್ರೊ. ನಂಜುಂಡಪ್ಪ ವರದಿಯ ಪ್ರಕಾರ ರಾಯಚೂರು ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿ ಗುರುತಿಸಲ್ಪಟ್ಟಿದ್ದು, ವರದಿ ಜಾರಿಯಾಗಿ 22 ವರ್ಷಗಳಾದರೂ ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಂಡಿಲ್ಲ. ಈ ಹಿನ್ನೆಲೆ ಗೋವಿಂದರಾವ್ ಸಮಿತಿ ರಚನೆಯಾಗಿದ್ದು, ಈ ಭಾಗದ ಶಾಸಕರು ಒಗ್ಗಟ್ಟಿನಿಂದ ಸರ್ಕಾರದ ಗಮನ ಸೆಳೆಯಬೇಕು ಎಂದು ಹೇಳಿದರು.

371(ಜೆ) ಕಲಂ ಜಾರಿಗೆ ಬಂದ ನಂತರ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸಿಕ್ಕಿರುವುದು ಶ್ಲಾಘನೀಯ. ಆದರೆ ನಂಜುಂಡಪ್ಪ ವರದಿ ಅನ್ವಯ ತಾಲೂಕು ಆಧಾರದ ಮೇಲೆ ಅನುದಾನ ಹಂಚಿಕೆಯಾಗುತ್ತಿರುವುದರಿಂದ ಕೆಲವು ಕ್ಷೇತ್ರಗಳಿಗೆ ಅನ್ಯಾಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಏಪ್ರಿಲ್ 24ರಂದು ರಾಯಚೂರಿನಲ್ಲಿ ನಡೆಯಲಿರುವ ಕಲ್ಯಾಣ ಕರ್ನಾಟಕ ವಿಕಾಸ ವೇದಿಕೆಯ ಸಂಸ್ಥಾಪನಾ ಸಮಾರಂಭದಲ್ಲಿ ಗೋವಿಂದರಾವ್ ಸಮಿತಿ ವರದಿಯ ಸಾಧಕಬಾಧಕಗಳನ್ನು ಚರ್ಚಿಸಿ, ಪಕ್ಷಾತೀತವಾಗಿ ಒಗ್ಗಟ್ಟಿನಿಂದ ಧ್ವನಿ ಎತ್ತುವ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಸಂಘಟನೆಯ ಅಧ್ಯಕ್ಷ ರಾಘವೇಂದ್ರ, ಕುಷ್ಟಗಿ ಪ್ರಾಸ್ತಾವಿಕವಾಗಿ ಮಾತನಾಡಿ, ಇಂದಿರಾಗಾಂಧಿ ಕಾಲದಿಂದಲೂ ರಾಯಚೂರು ಹಿಂದುಳಿದ ಜಿಲ್ಲೆ ಎಂಬ ಗುರುತು ಹೊಂದಿದ್ದು, ಇಂದಿಗೂ ಅಭಿವೃದ್ಧಿ ಆಗದಿರುವುದು ವಿಷಾದನೀಯ ಎಂದರು. ಹೈದರಾಬಾದ್ ಕರ್ನಾಟಕ ಎಂಬ ಹೆಸರನ್ನು ಕಲ್ಯಾಣ ಕರ್ನಾಟಕ ಎಂದು ಬದಲಿಸಿದರೂ ಭಾಗದ ನಿಜವಾದ ಅಭಿವೃದ್ಧಿ ಸಾಧ್ಯವಾಗಿಲ್ಲ ಎಂದು ಹೇಳಿದರು.

ಈ ಭಾಗದ ಜನಪ್ರತಿನಿಧಿಗಳು ಅಭಿವೃದ್ಧಿ ಕುರಿತಾಗಿ ಗಂಭೀರವಾಗಿ ಕೆಲಸ ಮಾಡುತ್ತಿಲ್ಲ ಎಂಬ ಅಸಮಾಧಾನ ವ್ಯಕ್ತಪಡಿಸಿದ ಅವರು, ಏಪ್ರಿಲ್ 24ರಂದು 371(ಜೆ) ಹೋರಾಟಗಾರರ ಸಮಾವೇಶ, ದುಂಡು ಮೇಜಿನ ಸಭೆ ಹಾಗೂ ಕಲ್ಯಾಣ ಕರ್ನಾಟಕ ವಿಕಾಸ ವೇದಿಕೆಯ ಸ್ಥಾಪನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ಉಪಾಧ್ಯಕ್ಷ ಡಾ. ರಝಾಕ್ ಉಸ್ತಾದ್, ಕರ್ನಾಟಕ ರಾಜ್ಯ ರೈತ ಸಂಘದ ಗೌರವ ಅಧ್ಯಕ್ಷ ಚಾಮರಸ ಮಾಲಿಪಾಟೀಲ, ನಾಗರಿಕ ವೇದಿಕೆ ಸಂಚಾಲಕಿ ಶಾರದಾ ಹುಲಿನಾಯಕ, ಬಸವ ಕೇಂದ್ರದ ಗೌರವ ಅಧ್ಯಕ್ಷ ಹರವಿ ನಾಗನಗೌಡ, ಬಿ. ಬಸವರಾಜ, ಜಾನವೆಸ್ಲಿ, ತ್ರಿವಿಕ್ರಮ ಜೋಶಿ, ವಾಣಿಜ್ಯೋದ್ಯಮಿ ಸಂಘದ ಜಿಲ್ಲಾಧ್ಯಕ್ಷ ಕಮಲಕುಮಾರ ಜೈನ್ ಹಾಗೂ ಹತ್ತಿ ಗಿರಣಿ ಮಾಲಕರ ಸಂಘದ ಜಿಲ್ಲಾ ಅಧ್ಯಕ್ಷ ವಿ. ಲಕ್ಷ್ಮಿ ರೆಡ್ಡಿ, ಜಮಾತೆ ಇಸ್ಲಾಂ ಜಿಲ್ಲಾ ಘಟಕದ ಮುಖಂಡ ಸಲೀತ ಪಾಶ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಎಸ್ಸಿ ಪಿ-ಟಿಎಸ್ಪಿ ಯೋಜನೆಯಡಿ ರೈತರಿಗೆ ಪಂಪ್,ಮೋಟಾರ್ ವಿತರಣೆ

ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ-ಬೋಸರಾಜು



ಸಿರವಾರ,ಏ.19-

ನೀರಿನ ಪ್ರಾಮುಖ್ಯತೆಯನ್ನು ಅರಿತು ದೂರದೃಷ್ಟಿಯನ್ನು ಇಟ್ಟುಕೊಂಡು ಅಂತರ್ಜಲ ಮಟ್ಟವನ್ನು ಹೆಚ್ಚಳ ಮಾಡಲು ಮತ್ತು ಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕೊಳವೆ ಭಾವಿಗಳನ್ನು ಕೊರೆಯುವುದು ಮತ್ತು ಹಳ್ಳ ನಾಲಾಗಳಿಗೆ ಚೆಕ್'ಡ್ಯಾಮ್ ನಿರ್ಮಾಣದಂತಹ ಹಲವು ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಗ್ರಾಮೀಣ ಭಾಗದ ಅಂತರ್ಜಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು, ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವ ಎನ್.ಎಸ್.ಬೋಸ ರಾಜು ಹೇಳಿದರು.

ತಾಲೂಕಿನ ನವಲಕಲ್ ಗ್ರಾಮದ ಶಾಂಭವಿ

3 ನೇ ಪುಟಕ್ಕೆ

ದಿ.22 ರಿಂದ 26ರವರೆಗೆ 10ನೇ ವರ್ಷದ ವಾಸವಿ ಜಯಂತಿ ವಿಜೃಂಭಣೆಯಿಂದ ಆಚರಣೆ- ಪ್ರರುಷೋತ್ತಮ



ರಾಯಚೂರು, ಏ.19-

ಆರ್ಯವೈಶ್ಯ ಸಮಾಜದ ಶ್ರೀ ನಗರೇಶ್ವರ ದೇವಸ್ಥಾನ ಸಮಿತಿಯಿಂದ ದಿ 22-2026 ರಿಂದ 26-ರವರೆಗೆ 10ನೇ ವರ್ಷದ ವಾಸವಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುವುದೆಂದು ಸಮಿತಿ ಅಧ್ಯಕ್ಷರಾದ ಸಾವಿತ್ರಿ ಪ್ರರುಷೋತ್ತಮ ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಈ ಐದು ದಿನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸೇರಿದಂತೆ ಅನೇಕ ಕಾರ್ಯಕ್ರಮಗಳು ಬೆಳ್ಳಿಗಿನ ಜಾವ 5 ಗಂಟೆಯಿಂದ ರಾತ್ರಿ10 ಗಂಟೆವರೆಗೆ ನಿರಂತರ ಕಾರ್ಯಕ್ರಮಗಳು ನಡೆಯಲಿವೆ.

ದಿ. 26 ರಂದು ರವಿವಾರ ಸಂಜೆ 5-30 ರಿಂದ ಶ್ರೀ ವಾಸವಿ ಮಾತೆ ಅಮ್ಮನವರ ಭವ್ಯವಾದ ಹೂವಿನ ಅಲಂಕಾರ ರಥೋತ್ಸವ ಜೊತೆಗೆ ವಿವಿಧ ಡೊಳ್ಳು ಕಂಚಿಮೇಳ ಹಾಗೂ ಇನ್ನಿತರ ಸಾಂಸ್ಕೃತಿಕ ತಲುಪುವುದು ತದನಂತರ ತೊಟ್ಟಿಲ ಸೇವೆ. ನಂತರ ತೀರ್ಥ ಪ್ರಸಾದ ವಿತರಣೆ ನಡೆಯಲಿದೆ.ವಾಸವಿ ಜಯಂತ ಪ್ರಯುಕ್ತ ದಿ. 26 ರಂದು ರವಿವಾರ ತಮ್ಮ ವ್ಯಾಪಾರ ವಹಿವಾಟುಗಳು ಹಾಗೂ ವೃತ್ತಿಪರರಿಗೆ ಸಮಾಜದ ವತಿಯಿಂದ ರಜೆ ಘೋಷಿಸಲಾಗಿದೆ ಎಂದರು.ದಿ. 26 ರಂದು ರವಿವಾರ ಬೆಳಿಗ್ಗೆ 8 ಕ್ಕೆ ಉಪಹಾರ.ಮಧ್ಯಾಹ್ನ 1-30 ಕ್ಕೆ

3 ನೇ ಪುಟಕ್ಕೆ

ಕೆರೆ -ಸರ್ಕಾರಿ ಭೂಮಿ ಒತ್ತುವರಿ: ಕ್ರಮ ಕೈಗೊಳ್ಳದಿದ್ದರೆ ಹೋರಾಟಕ್ಕೆ ಎಚ್ಚರಿಕೆ

ರಾಯಚೂರು, ಏ.19:



ರಾಯಚೂರು ನಗರದ ವಾರ್ಡ್ ನಂ. 30 ಮತ್ತು 31 ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು ಹಾಗೂ ಕೆರೆಗಳನ್ನು ಅತಿಕ್ರಮಿಸಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ ಎಂದು ಸಿಯಾತಲಾಬ್ ಪ್ರಗತಿಪರ ಚಿಂತಕರ ವೇದಿಕೆ ಸದಸ್ಯರು ಆರೋಪಿಸಿದರು. ನಗರದ ಪತ್ರಿಕಾ ಭವನದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಮುಖಂಡ ಕೆ.ಈ. ಕುಮಾರ್ ಮಾತನಾಡಿ, ಈ ಕುರಿತು ಉಗ್ರ ಆಕ್ರೋಶ ವ್ಯಕ್ತಪಡಿಸಿದರು.

ವಾರ್ಡ್ ನಂ. 31ರಲ್ಲಿ ಬರುವ ಸರ್ವೆ ನಂ. 1629 ಹಾಗೂ 33/1ರ ಸರ್ಕಾರಿ ಸ್ಥಳವನ್ನು ಕೆಲವು ಭೂಗಳ್ಳರು ಅತಿಕ್ರಮಿಸಿಕೊಂಡು ಕಾಂಪೌಂಡ್ ಹಾಗೂ ಕಟ್ಟಡಗಳನ್ನು ನಿರ್ಮಿಸಿರುವ ಬಗ್ಗೆ ಈಗಾಗಲೇ ದೂರು ನೀಡಲಾಗಿದೆ ಎಂದು ಹೇಳಿದರು. ಈ ಸಂಬಂಧ ಮಹಾನಗರ ಪಾಲಿಕೆ ಆಯುಕ್ತರು ರಿಗೆ ದಿ.08-04-2026ರಂದು ಜಿಲ್ಲಾಧಿಕಾರಿ ಹಾಗೂ ಸಹಾಯಕ ಆಯುಕ್ತರಿಗೆ ಪತ್ರ ಬರೆದು, ವಿಷಯ ತಮ್ಮ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದರೂ, ಇದುವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ವಿಷಾದನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಮೃತ ಆಸ್ಪತ್ರೆ ಪಕ್ಕದಲ್ಲಿರುವ ಸ್ಥಳದಲ್ಲಿಯೂ ತಟ್ಟೆ ಹಾಕಿ ಕಾಂಪೌಂಡ್ ನಿರ್ಮಾಣ ಕಾರ್ಯ ಮುಂದುವರಿದಿದ್ದು, ಜಿಲ್ಲಾಡಳಿತ ಹಾಗೂ ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿದ್ದಾರೆ ಎಂದು ಆರೋಪಿಸಿದರು. ಸಾರ್ವಜನಿಕರು ದೂರು ನೀಡಿದಾಗ ಮಾತ್ರ ಪತ್ರ ವ್ಯವಹಾರ ನಡೆಸುತ್ತಿರುವುದು ಸರಿಯಲ್ಲ ಎಂದರು.

3 ನೇ ಪುಟಕ್ಕೆ



ಕೊಪ್ಪರ: ಡಾ.ಬಿ. ಆರ್ ಅಂಬೇಡ್ಕರ -ಡಾ ಬಾಬು ಜಗಜೀವನ್ ರಾಮ್ ಸ್ತಬ್ಧಚಿತ್ರ ಮೆರವಣಿಗೆ

ದೇವದುರ್ಗ,ಏ.19-

ತಾಲೂಕಿನ ಕೊಪ್ಪರ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಭಾರತದ ಮಾಜಿ ಉಪಪ್ರಧಾನಿ ಡಾ ಬಾಬು ಜಗಜೀವನ್ ರಾಮ್ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಜಯಂತಿ ಕಾರ್ಯಕ್ರಮದ ಆಯೋಜಕ ಚನ್ನಬಸವ ಸೂಗರಾಳ ಮ್ಯಾತ್ರಿ ಕೊಪ್ಪರ ಮಾತನಾಡಿ ಕೊಪ್ಪರ ಗ್ರಾಮದ ಯುವ ಸಮುದಾಯವು ಒಗ್ಗಟ್ಟಿನಿಂದ ಸೇರಿಕೊಂಡು ಮಹಾನಾಯಕರ ಜಯಂತಿಗಳು ಮಾಡುತ್ತಿರುವುದು ಸ್ಲಾಘನಿಯ ಜಯಂತಿಗಳು ಕೇವಲ ಸಂಭ್ರಮಕ್ಕೆ ಸೀಮಿತವಾಗದೆ ಮಹಾ ನಾಯಕ, ಮಾನವತಾವಾದಿ

ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಮ್ ಅವರ ತತ್ವಗಳನ್ನು

3 ನೇ ಪುಟಕ್ಕೆ

ಮ್ಯಾನ್‌ಹೋಲ್ ಸ್ವಚ್ಛತೆಗೆ ಮಾನವ ಸಂಪನ್ಮೂಲ

ಬಳಕೆ ನಿಷೇಧ: ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ

ರಾಯಚೂರು ಏಪ್ರಿಲ್ 18

ನಗರದ ವ್ಯಾಪ್ತಿಯಲ್ಲಿ ಮ್ಯಾನ್‌ಹೋಲ್ ಹಾಗೂ ಸೆಪ್ಟಿಕ್ ಟ್ಯಾಂಕ್‌ಗಳ ಸ್ವಚ್ಛತೆಗಾಗಿ ಯಾವುದೇ ಕಾರಣಕ್ಕೂ ಮಾನವ ಸಂಪನ್ಮೂಲವನ್ನು ಬಳಸಬಾರದು ಎಂದು ರಾಯಚೂರು ಮಹಾನಗರ ಪಾಲಿಕೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ಮ್ಯಾನ್‌ಹೋಲ್ ಸ್ವಚ್ಛತೆಗೆ ಕಾರ್ಮಿಕರನ್ನು ಇಳಿಸುವುದು ಕೈಯಿಂದ ಮಲ ಹೊರುವವರ ಉದ್ಯೋಗ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ 2013ರ ಅಡಿಯಲ್ಲಿ ಗಂಭೀರ ಅಪರಾಧವಾಗಿದ್ದು, ಇದನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಸಾರ್ವಜನಿಕರು ತಮ್ಮ ಮನೆ ಅಥವಾ ವಾಣಿಜ್ಯ ಸಂಸ್ಥೆಗಳ ಶೌಚಾಲಯದ ಗುಂಡಿಗಳನ್ನು ಸ್ವಚ್ಛಗೊಳಿಸಲು ಕಡ್ಡಾಯವಾಗಿ ಜೆಟ್ಟಿಂಗ್ ಯಂತ್ರಗಳನ್ನೇ ಬಳಸಬೇಕು. ಈ ನಿಟ್ಟಿನಲ್ಲಿ ಸಹಾಯಕ್ಕಾಗಿ ಪಾಲಿಕೆಯು ಅಧಿಕೃತ ವಾಹನ ಮಾಲೀಕರು ಮತ್ತು ಚಾಲಕರ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಪಾಲಿಕೆಯ ಸಿಬ್ಬಂದಿಗಳಾದ ಆಂಜನೇಯ (9535832979), ಶ್ರೀಕಾಂತ್ (9980487004) ಮತ್ತು ಅನಂತ ಮೂರ್ತಿ (9964627849) ಅವರನ್ನು ಸಂಪರ್ಕಿಸಬಹುದು. ಅಲ್ಲದೆ ಖಾಸಗಿ ಜೆಟ್ಟಿಂಗ್ ಯಂತ್ರಗಳಿಗಾಗಿ ಕೃಷ್ಣ (9052245304), ವಿಜಯ ಕುಮಾರ್ (9620733791), ಮಂಜುನಾಥ (9008719827), ಗಂಗಣ್ಣ (9535623784) ಹಾಗೂ ಶಿವಣ್ಣ (9945118602) ಅವರನ್ನು ಸಂಪರ್ಕಿಸಲು ಕೋರಲಾಗಿದೆ. ಒಟ್ಟಾರೆಯಾಗಿ ನಗರದ ನೈರ್ಮಲ್ಯ ಕಾಪಾಡುವಲ್ಲಿ ಮತ್ತು ಕಾನೂನು ಪಾಲಿಸುವಲ್ಲಿ ಸಾರ್ವಜನಿಕರು ಸಹಕರಿಸಬೇಕು ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಈ ಮೂಲಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಆರೋಗ್ಯ ಸಂಘದ ಸಮನ್ವಯ ಸಮಿತಿ ಸಭೆ

ಕುಡಿಯುವ ನೀರಿನ ಪರೀಕ್ಷೆ ಕಡ್ಡಾಯವಾಗಿ ಮಾಡಿ: ಈಶ್ವರ ಕುಮಾರ

ರಾಯಚೂರು ಏಪ್ರಿಲ್ 18

ಬೇಸಿಗೆ ಶುರುವಾಗಿದ್ದು, ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಬೇಕೆಂದು ಪ್ರಭಾರ ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗ ಈಶ್ವರ ಕುಮಾರ ಕಾಂದೂ ಅವರು ಸಂಬಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಏಪ್ರಿಲ್ 17ರ ಶುಕ್ರವಾರ ದಂದು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತುಂಗಾ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಲುಷಿತ ನೀರಿನಿಂದ ಹಲವು ಪ್ರಕರಣಗಳು ವರದಿಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ನೀರಿನ ಪರೀಕ್ಷೆಯನ್ನು ಕಡ್ಡಾಯಗೊಳಿಸಬೇಕು. ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಹೈಡ್ರೋಜನ್ ಕ್ಲೋರೈಡ್, ಫ್ಲೋರೈಡ್, ಐರನ್, ನೈಟ್ರೇಟ್, ಅಲ್ಕಲೈನಿಟಿ, ಕ್ಲೋರಿನಿ ಹಾಗೂ ಒಟ್ಟು ಕರಗಿದ ಘನವಸ್ತುಗಳ ಸಾಮರ್ಥ್ಯ, ಬ್ಯಾಕ್ಟೀರಿಯಾ ಹಾಗೂ ಹೈಡ್ರೋಜನ್ ಸಲ್ಫೈಡ್ ಪರೀಕ್ಷೆಯನ್ನೂ ಕೂಡ ನಡೆಸಬೇಕೆಂದರು.

ಪ್ರಸ್ತುತ ಹವಮಾನ ಬದಲಾವಣೆ ಹಾಗೂ ಪ್ರಖರ



ಬಿಸಿಲಿನ ತಾಪಮಾನದಿಂದ ಪ್ರತಿಯೊಬ್ಬರ ಸುರಕ್ಷತೆಗಾಗಿ ನಿರಂತರ ಜಾಗೃತಿ, ಮತ್ತು ಎಲ್ಲ ಕುಡಿಯುವ ನೀರಿನ ಮೂಲಗಳು ಕುಡಿಯಲು ಯೋಗ್ಯವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. 40 ಡಿಗ್ರಿಗಿಂತ ಹೆಚ್ಚು ಇರುವ ತಾಪಮಾನ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಾಗುವ ಸಾಧ್ಯತೆ ಇದ್ದು, ನವಜಾತ ಶಿಶು ಹಾಗೂ ಚಿಕ್ಕ ಮಕ್ಕಳು ಗರ್ಭಿಣಿ, ಬಾಣಂತಿ, ಸೇರಿದಂತೆ ವಯೋವೃದ್ದರು, ಧೀರ್ಘಕಾಲದಿಂದ ಖಾಯಿಲೆಗಳಿಂದ ಬಳಲುವವರು, ಹೊರ ಆವರಣದಲ್ಲಿ ದೈಹಿಕವಾಗಿ ದಿನನಿತ್ಯ ಕೆಲಸ ಮಾಡುವ ಕೂಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಮುಂತಾದವರಿಗೆ ಹೆಚ್ಚು ಜೊಪಾನ ಮಾಡಲು ಮಧ್ಯಾನ್ಹ 12 ಗಂಟೆಯಿದ 4 ಗಂಟೆಯವರೆಗೆ ಮನೆಯಲ್ಲಿ ಇರುವಂತೆ, ಅಗತ್ಯ ಸಂದರ್ಭದಲ್ಲಿ ಮನೆ ಹೊರಗೆ ಬರುವಾಗ, ಹತ್ತಿ ಉಡುಪು ಬಳಕೆ, ಛತ್ರಿ, ಕುಡಿಯುವ ನೀರು ಇರುವಂತೆ ಸಾರ್ವಜನಿಕರಿಗೆ ಗುಂಪು ಸಭೆ, ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಹಾಗೂ ತುರ್ತು ಸಂದರ್ಭ ಎದುರಿಸಲು ತಾಲೂಕಾ ಆಸ್ಪತ್ರೆಗಳಲ್ಲಿ 5 ಐಸಿಯು ಬೆಡ್‌ಗಳ

3 ನೇ ಪುಟಕ್ಕೆ

ಕೃಷಿರಂಗ ಕೃಷಿ ವಿಜ್ಞಾನಗಳಲ್ಲಿ ಉನ್ನತ ಶಿಕ್ಷಣ ಅಧ್ಯಯನಕ್ಕೆ ಇಲ್ಲಿವೆ ಹತ್ತಾರು ಆಯ್ಕೆ



ಇದೀಗ ದ್ವಿತೀಯ ಪಿಯುಸಿಯ ಫಲಿತಾಂಶ ಬಂದಿದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ದಿಕ್ಕನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ವೈದ್ಯಕೀಯ, ಇಂಜಿನಿಯರಿಂಗ್, ಕೃಷಿ ವಿಜ್ಞಾನಗಳು, ಕಾನೂನು, ಕಲೆ, ವಾಣಿಜ್ಯ, ವಿಜ್ಞಾನದಲ್ಲಿ ಸ್ನಾತಕ ಪದವಿಯಂತಹ ಹತ್ತಾರು ದಾರಿಗಳ ಆಯ್ಕೆಗಳಿವೆ.

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು ಎಂಬುದು ಗಾದೆ ಮಾತು. ಇದು ತನ್ನ ಮೂಲದಲ್ಲಿ ರೈತರಿಗೆ ಅನ್ವಯಿಸುವ ಮಾತಾದರೂ ಪಿಯುಸಿಯ ನಂತರ ಕೃಷಿ ವಿಜ್ಞಾನಗಳಲ್ಲಿ ಯಾವುದಾದರೂ ಒಂದು ಸ್ನಾತಕ ಪದವಿಯನ್ನು ಅಧ್ಯಯನ ಮಾಡಬೇಕು ಎಂಬ ತೀವ್ರತರದ ಆಸೆಯನ್ನು ಇಟ್ಟುಕೊಂಡಿರುವ ವಿದ್ಯಾರ್ಥಿಗಳಿಗೂ ಈ ಗಾದೆ ಅನ್ವಯಿಸುತ್ತದೆ. ಅವರ ಪೋಷಕರೂ ಅಂತಹ ಆಸೆಗೆ ಬೆಂಬಲವಾಗಿ ನಿಂತಿರುತ್ತಾರೆ. ಅಂತಹ ಕೃಷಿ ವಿಜ್ಞಾನಗಳಲ್ಲಿ 1. ಕೃಷಿ, 2. ತೋಟಗಾರಿಕೆ, 3. ಅರಣ್ಯ ಕೃಷಿ, 4. ಕೃಷಿ ವ್ಯವಹಾರ ನಿರ್ವಹಣೆ, 5. ಕೃಷಿ ಜೈವಿಕ ತಂತ್ರಜ್ಞಾನ, 6. ಕೃಷಿ ಆಹಾರ ತಂತ್ರಜ್ಞಾನ, 7. ರೇಷ್ಮೆ ಕೃಷಿ, 8. ಸಮುದಾಯ ವಿಜ್ಞಾನ, 9. ಕೃಷಿ ಇಂಜಿನಿಯರಿಂಗ್, 10. ಪಶುವೈದ್ಯಕೀಯ ವಿಜ್ಞಾನ, 11. ಹೈನುಗಾರಿಕೆ ತಂತ್ರಜ್ಞಾನ, 12. ಮೀನುಗಾರಿಕಾ ವಿಜ್ಞಾನ, (1. ,2. ,3. ,4. . ,5. ,6. ,7. ,8. ,9. ,10. , 11. ,12.) ಎಂಬ ಪದವಿ ಕೋರ್ಸುಗಳಿವೆ.

ಸಾಮಾನ್ಯ ಪ್ರವೇಶ ಪರೀಕ್ಷೆ

ಅಭ್ಯರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದಲ್ಲಿ ತಯಾರಾದ ಶ್ರೇಣಿಯನ್ನು ಅವಲಂಬಿಸಿ ವಿವಿಧ ಕೋರ್ಸುಗಳಿಗೆ ಪ್ರವೇಶ ನೀಡಲಾಗುತ್ತದೆ. ಜೊತೆಗೆ, ಕೆಲವು ಸೀಟುಗಳಿಗೆ ಅನಿವಾಸಿ ಭಾರತೀಯ ಮತ್ತಿತರ ಕೋಟಾದಡಿಯಲ್ಲಿ ವಿವಿ ಮಟ್ಟದಲ್ಲಿ ಪ್ರವೇಶ ನೀಡಲಾಗುತ್ತದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಹಾಗೂ ಭಾರತೀಯ ಪಶುವೈದ್ಯಕೀಯ ಪರಿಷತ್ತು ಅವುಗಳ ನಿಗದಿಯಾದ ಕೋಟಾದಂತೆ ಸೀಟುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತವೆ.

ರೈತರ ಮಕ್ಕಳಿಗೆ ಶೇ. 50 ಮೀಸಲಾತಿ

ಕೃಷಿ ವಿಜ್ಞಾನಗಳ ವಿವಿಧ ಕೋರ್ಸುಗಳಲ್ಲಿ ರಾಜ್ಯ ಸರ್ಕಾರದ ತೀರ್ಮಾನದಂತೆ ರೈತರ ಮಕ್ಕಳಿಗೆ ಶೇ. 50ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ. ಅಂತಹ ಮೀಸಲಾತಿಯನ್ನು ಬಯಸುವ ಅಭ್ಯರ್ಥಿಗಳು ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಇದೇ ಏಪ್ರಿಲ್ 10, 2026ರಂದು ಹೊರಡಿಸಿರುವ ಪ್ರಕಟಣೆಯನ್ನು ಗಮನಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಕೃಷಿ ಮತ್ತಿತರ ಕೃಷಿ ಸಂಬಂಧಿತ ಉದ್ಯೋಗದಲ್ಲಿ ತೊಡಗಿಕೊಂಡಿರುವ ಪೋಷಕರ ಮಕ್ಕಳು ಅಗತ್ಯವಿರುವ ಎಲ್ಲಾ ಸರ್ಟಿಫಿಕೇಟುಗಳನ್ನು ಸಲ್ಲಿಸಬೇಕು. ಪೋಷಕರ ಪ್ರಮುಖ ಆದಾಯವು ಕೃಷಿ ಮತ್ತಿತರ ಕೃಷಿ ಸಂಬಂಧಿತ ಉದ್ಯೋಗಗಳಿಂದ ಗಳಿಸುತ್ತಿರಬೇಕು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳು

ಪಿಯುಸಿ ನಂತರದ ಶಿಕ್ಷಣದ ಆಯ್ಕೆಯನ್ನು ಟರ್ನಿಂಗ್ ಪಾಯಿಂಟ್ ಎಂದು ವ್ಯಾಖ್ಯಾನಿಸಲಾಗಿದೆ. ವಿದ್ಯಾರ್ಥಿಯ ಉನ್ನತ ಶಿಕ್ಷಣವನ್ನು ಮತ್ತು ಜೀವನವನ್ನು ರೂಪಿಸಿಕೊಳ್ಳುವ ಒಂದು ಪ್ರಮುಖ ಘಟ್ಟವದು. ಕೃಷಿ ವಿಜ್ಞಾನಗಳಲ್ಲಿ ಉನ್ನತ ಶಿಕ್ಷಣವನ್ನು ಆಧ್ಯಯನ ಮಾಡಲು ಕರ್ನಾಟಕ ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳೇಂದರೆ, 1. ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, 2. ಕೃಷಿ ವಿಶ್ವವಿದ್ಯಾಲಯ, ಧಾರವಾಡ, 3. ಪಶುವೈದ್ಯಕೀಯ,



ಪಶು ಹಾಗೂ ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್, 4. ಕೃಷಿ ವಿಶ್ವವಿದ್ಯಾಲಯ, ರಾಯಚೂರು, 5. ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, 6. ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಮತ್ತು 7. ಕೃಷಿ ವಿಶ್ವವಿದ್ಯಾಲಯ, ಮಂಡ್ಯ.

ಪ್ರವೇಶ ಬಯಸುವ ವಿದ್ಯಾರ್ಥಿಗಳ ಮಾಹಿತಿಗಾಗಿ ವಿವಿಧ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ವ್ಯಾಪ್ತಿ, ಕಾಲೇಜುಗಳು ಮತ್ತು ಕೋರ್ಸುಗಳ ವಿವರಗಳನ್ನು ಈ ಮುಂದಿನಂತೆ ನೀಡಲಾಗಿದೆ. ಓದುವ ಕ್ರಮ: ವಿವಿಧ ವಿಶ್ವವಿದ್ಯಾಲಯಗಳ ಅಡಿಯಲ್ಲಿರುವ ಕಾಲೇಜಿನ ಹೆಸರು, ಸ್ಥಳ ಮತ್ತು ಪದವಿ ಕಾರ್ಯಕ್ರಮ.

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಇಂಜಿನಿಯರಿಂಗ್ ಕಾಲೇಜು, ಜಿಕೆವಿಕೆ, ಬೆಂಗಳೂರು, ಬಿ ಟೆಕ್. ಕೃಷಿ ಇಂಜಿನಿಯರಿಂಗ್

ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು, ಬಿಎಸ್ಸಿ (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ

ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು, ಬಿಎಸ್ಸಿ (ಆನರ್ಸ್) ಆಹಾರ, ಪೋಷಣೆ ಮತ್ತು ಪೌಷ್ಟಿಕಾಂಶ ವಿಜ್ಞಾನ

ಕೃಷಿ ಕಾಲೇಜು, ಚಿಂತಾಮಣಿ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಚಿಂತಾಮಣಿ, ಬಿಎಸ್ಸಿ (ಆನರ್ಸ್) ರೇಷ್ಮೆ ಕೃಷಿ

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಕೃಷಿ ಕಾಲೇಜು, ಧಾರವಾಡ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಧಾರವಾಡ, ಬಿಎಸ್ಸಿ (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆ

ಕೃಷಿ ಕಾಲೇಜು, ವಿಜಯಪುರ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಹನುಮನಮಟ್ಟಿ, ಬಿಎಸ್ಸಿ (ಆನರ್ಸ್) ಕೃಷಿ

ಅರಣ್ಯ ವಿಜ್ಞಾನ ಕಾಲೇಜು, ಶಿರಸಿ, ಬಿಎಸ್ಸಿ (ಆನರ್ಸ್) ಅರಣ್ಯ ವಿಜ್ಞಾನ

ಸಮುದಾಯ ವಿಜ್ಞಾನ ಕಾಲೇಜು, ಧಾರವಾಡ, ಬಿಎಸ್ಸಿ (ಆನರ್ಸ್) ಸಮುದಾಯ ವಿಜ್ಞಾನ

ಸಮುದಾಯ ವಿಜ್ಞಾನ ಕಾಲೇಜು, ಧಾರವಾಡ, ಬಿ. ಟೆಕ್. (ಆಹಾರ ತಂತ್ರಜ್ಞಾನ)

ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್

ಪಶುವೈದ್ಯಕೀಯ ಕಾಲೇಜು, ಹೆಬ್ಬಾಳ, ಬೆಂಗಳೂರು, ಬಿ.ವಿ.ಎಸ್ಸಿ . ಎ.ಎಚ್.

ಪಶುವೈದ್ಯಕೀಯ ಕಾಲೇಜು, ಬೀದರ್, ಬಿ.ವಿ.ಎಸ್ಸಿ . ಎ.ಎಚ್.

ಪಶುವೈದ್ಯಕೀಯ ಕಾಲೇಜು, ಶಿವಮೊಗ್ಗ, ಬಿ.ವಿ.ಎಸ್ಸಿ . ಎ.ಎಚ್.

ಹಾಸನ ಪಶುವೈದ್ಯಕೀಯ ಕಾಲೇಜು, ಹಾಸನ, ಬಿ.ವಿ.ಎಸ್ಸಿ . ಎ.ಎಚ್.

ಪಶುವೈದ್ಯಕೀಯ ಕಾಲೇಜು, ಗದಗ, ಬಿ.ವಿ.ಎಸ್ಸಿ . ಎ.ಎಚ್.

ಪಶುವೈದ್ಯಕೀಯ ಕಾಲೇಜು, ಅಥಣಿ, ಬಿ.ವಿ.ಎಸ್ಸಿ . ಎ.ಎಚ್.

ಮೀನುಗಾರಿಕಾ ಕಾಲೇಜು, ಮಂಗಳೂರು, ಬಿ. ಎಫ್. ಎಸ್ಸಿ .

ಹೈನುಗಾರಿಕಾ ಕಾಲೇಜು, ಹೆಬ್ಬಾಳ, ಬೆಂಗಳೂರು, ಬಿ. ಟೆಕ್ (ಡಿ. ಟೆಕ್.)

ಹೈನುಗಾರಿಕಾ ಕಾಲೇಜು, ಮಹಗಾವ ಕ್ರಾಸ್, ಕಲಬುರಗಿ, ಬಿ. ಟೆಕ್ (ಡಿ. ಟೆಕ್.)

ಕೃಷಿ ವಿಶ್ವವಿದ್ಯಾಲಯ, ರಾಯಚೂರು

ಕೃಷಿ ಕಾಲೇಜು, ರಾಯಚೂರು, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು, ಬಿ. ಟೆಕ್ (ಕೃಷಿ ಇಂಜಿನಿಯರಿಂಗ್)

ಕೃಷಿ ಕಾಲೇಜು, ಭೀಮರಾಯನಗುಡಿ, ಯಾದಗಿರಿ ಜಿಲ್ಲೆ. ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಕಲಬುರಗಿ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಗಂಗಾವತಿ, ಕೊಪ್ಪಳ ಜಿಲ್ಲೆ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಹಗರಿ, ಬಳ್ಳಾರಿ ಜಿಲ್ಲೆ, ಬಿಎಸ್ಸಿ (ಆನರ್ಸ್) ಕೃಷಿ

ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ತೋಟಗಾರಿಕಾ ಕಾಲೇಜು, ಉದ್ಯಾನಗಿರಿ, ನವನಗರ, ಬಾಗಲಕೋಟೆ ಜಿಲ್ಲೆ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ಮುನಿರಾಬಾದ್, ಕೊಪ್ಪಳ ಜಿಲ್ಲೆ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ಕಿತ್ತೂರು ರಾಣಿ ಚನ್ನಮ್ಮ ತೋಟಗಾರಿಕಾ ಕಾಲೇಜು, ಅರಬಾವಿ, ಬೆಳಗಾವಿ ಜಿಲ್ಲೆ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ಬೀದರ್, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ಶಿರಸಿ, ಉತ್ತರ ಕನ್ನಡ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ಜಿಕೆವಿಕೆ, ಬೆಂಗಳೂರು, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ತಮಕ, ಕೋಲಾರ ಜಿಲ್ಲೆ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ಇಲವಾಲ, ಮೈಸೂರು, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ಡಿಎಸ್ಎಲ್‌ಡಿ ತೋಟಗಾರಿಕಾ ಇಂಜಿನಿಯರಿಂಗ್ ಮತ್ತು ಆಹಾರ ತಂತ್ರಜ್ಞಾನ ಕಾಲೇಜು, ದೇವಿಹೊಸೂರು, ಹಾವೇರಿ ಜಿಲ್ಲೆ, ಬಿ. ಟೆಕ್ (ಆಹಾರ ತಂತ್ರಜ್ಞಾನ)

ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

ಕೃಷಿ ಕಾಲೇಜು, ನವಿಲೆ, ಶಿವಮೊಗ್ಗ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಇರುವಕ್ಕಿ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಇರುವಕ್ಕಿ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ಕೃಷಿ ಕಾಲೇಜು, ಇರುವಕ್ಕಿ, ಬಿಎಸ್ಸಿ (ಆನರ್ಸ್) ಅರಣ್ಯ ವಿಜ್ಞಾನ

ತೋಟಗಾರಿಕಾ ಕಾಲೇಜು, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ಬಿಎಸ್ಸಿ (ಆನರ್ಸ್) ತೋಟಗಾರಿಕೆ

ತೋಟಗಾರಿಕಾ ಕಾಲೇಜು, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ವಿಶ್ವವಿದ್ಯಾಲಯ, ಮಂಡ್ಯ

ಕೃಷಿ ಕಾಲೇಜು, ಮಂಡ್ಯ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಹಾಸನ, ಬಿಎಸ್ಸಿ (ಆನರ್ಸ್) ಕೃಷಿ

ಕೃಷಿ ಕಾಲೇಜು, ಹಾಸನ, ಬಿ. ಟೆಕ್. (ಜೈವಿಕ ತಂತ್ರಜ್ಞಾನ)

ಕೃಷಿ ಕಾಲೇಜು, ಹಾಸನ, ಬಿ. ಟೆಕ್. (ಆಹಾರ ತಂತ್ರಜ್ಞಾನ)

ಕೃಷಿ ಕಾಲೇಜು, ಚಾಮರಾಜನಗರ, ಬಿಎಸ್ಸಿ (ಆನರ್ಸ್) ಕೃಷಿ

ಅರಣ್ಯ ವಿಜ್ಞಾನ ಕಾಲೇಜು, ಪೊನ್ನಂಪೇಟೆ, ಕೊಡಗು ಜಿಲ್ಲೆ, ಬಿಎಸ್ಸಿ (ಆನರ್ಸ್) ಅರಣ್ಯ ವಿಜ್ಞಾನ

ಇವುಗಳ ಜೊತೆಗೆ ಖಾಸಗಿ ಕೃಷಿ ಕಾಲೇಜುಗಳು ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಅಡಿಯಲ್ಲಿ ಆರಂಭವಾಗಿವೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ವಿಶ್ವವಿದ್ಯಾಲಯಗಳನ್ನು ಅಥವಾ ಕಾಲೇಜುಗಳನ್ನು ಸಂಪರ್ಕಿಸಬಹುದಾಗಿದೆ.

ಕೊನೆಯ ಮಾತು

ಹರಿದು ಹಂಚಿ ಹೋಗಿರುವ ಹಲವು ಕೃಷಿ ವಿಜ್ಞಾನಗಳ ಉನ್ನತ ಶಿಕ್ಷಣವನ್ನು ಒಂದೇ ಸೂರಿನಡಿ ತರಬೇಕಿದೆ. ಅದಕ್ಕಾಗಿ, ಅಧ್ಯಯನ ವರದಿಯನ್ನು ಸಲ್ಲಿಸಲು ಮಾಜಿ ಕುಲಪತಿಗಳಾದ ಡಾ. ಶೀಲವಂತ ಅವರ ಅಧ್ಯಕ್ಷತೆಯಲ್ಲಿ 2019ರಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸಮಿತಿಯು ಸಮಗ್ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅರ್ಥಾತ್ ಏಕೀಕರಣಗೊಂಡ ಬಹುಶಿಸ್ತೀಯ ಕೃಷಿ ವಿಶ್ವವಿದ್ಯಾಲಯಗಳ ರಚನೆಗೆ ಶಿಫಾರಸ್ಸು ಮಾಡಿತು. ತದನಂತರ, ಮಾರ್ಚ್ 2025ರಲ್ಲಿ ರಾಜ್ಯ ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿಗಳಾದ ಟಿ. ಎಂ. ವಿಜಯಭಾಸ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಮತ್ತೊಂದು ತಜ್ಞರ ಸಮಿತಿಯು ಸಮಗ್ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ರಚನೆಗೆ ಶಿಫಾರಸ್ಸು ಮಾಡಿದೆ. ಆದರೆ, ಕೃಷಿ ವಿಜ್ಞಾನಗಳ ಉನ್ನತ ಶಿಕ್ಷಣದಲ್ಲಿ ರಾಜಕೀಯದ ದುರ್ಗಂಧವು ನುಸುಳಿರುವುದರಿಂದ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆ ಎಂಬ ಕೃಷಿ ವಿಶ್ವವಿದ್ಯಾಲಯಗಳ ಉದ್ದೇಶಿತ ಧ್ಯೇಯಕ್ಕೆ ಹಿನ್ನಡೆಯಾಗಿದೆ. ಸಮಗ್ರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ರಚನೆಯು ಕನಸಾಗುವ ದಿನ ಎಂದು ಬರುವುದೋ ಎಂದು ಚಾತಕ ಪಕ್ಷಿಯಂತೆ ಕಾಯಬೇಕಿದೆ. ತೋಟಗಾರಿಕೆ ಮತ್ತು ಪಶುವೈದ್ಯಕೀಯ ವಿಶ್ವವಿದ್ಯಾಲಯಗಳು ರಾಜ್ಯ ವ್ಯಾಪ್ತಿಯನ್ನು ಹೊಂದಿರುವುದು ಹಲವು ಕಾರಣಗಳಿಂದಾಗಿ ಅನಾನುಕೂಲಕರವಾಗಿದೆ.

ಭೌಗೋಳಿಕವಾಗಿ ಕಡಿಮೆ ವ್ಯಾಪ್ತಿಯ ಕೃಷಿ ವಿಶ್ವವಿದ್ಯಾಲಯಗಳ ರಚನೆಯಾಗಬೇಕು. ರೈತರು ಬಯಸುವ ಸಲಹೆ ಸಹಕಾರಗಳು ಒಂದೇ ಸೂರಿನಡಿ ಲಭ್ಯವಿರಬೇಕು. ಕೃಷಿ ವಿಜ್ಞಾನಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿದ್ಯಾರ್ಥಿಗಳಿಗೆ ಅಂತಹ ವಿಜ್ಞಾನಗಳ ಕಾಲೇಜುಗಳೊಂದಿಗೆ ನಿಕಟ ಒಡನಾಟವಿದ್ದರೆ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಜ್ಞಾನಾರ್ಜನೆಗೆ ಹೆಚ್ಚು ಅನುಕೂಲಕರ. ವಿವಿಧ ಶಿಸ್ತುಗಳ ಶಿಕ್ಷಕರನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಉದಾಹರಣೆಗೆ: ತೋಟಗಾರಿಕಾ ವಿದ್ಯಾರ್ಥಿಗಳಿಗೆ ಕೃಷಿ ಕೀಟ ವಿಜ್ಞಾನ, ಶಿಲೀಂಧ್ರ ವಿಜ್ಞಾನ, ಮತ್ತಿತರ ವಿಷಯಗಳನ್ನು ಬೋಧಿಸಲು, ಸಂಶೋಧಿಸಲು, ವಿಸ್ತರಣೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕೃಷಿ ವಿಜ್ಞಾನಗಳ ಶಿಕ್ಷಕರು, ಕೃಷಿ ಪದವಿಯ ವಿದ್ಯಾರ್ಥಿಗಳಿಗೆ ಪಶು ವಿಜ್ಞಾನ ಬೋಧಿಸಲು ಪಶುವೈದ್ಯಕೀಯ ಶಿಕ್ಷಕರು ಮತ್ತು ಪಶುವೈದ್ಯಕೀಯ ವಿದ್ಯಾರ್ಥಿಗಳಿಗೆ ಮೇವು ಬೆಳೆಗಳ ವಿಜ್ಞಾನ ಬೋಧಿಸಲು ಕೃಷಿ ವಿಜ್ಞಾನಗಳ ಶಿಕ್ಷಕರು, ಹೀಗೆ ಶಿಕ್ಷಕರು ಪರಸ್ಪರ ಆಯಾಯ ಸಮಗ್ರ ಕೃಷಿ ವಿಶ್ವವಿದ್ಯಾಲಯಗಳಲ್ಲಿಯೇ ಲಭ್ಯವಾಗುತ್ತಾರೆ. ಶಿಕ್ಷಕರು ಅಂತರಶಿಸ್ತೀಯ ಜ್ಞಾನವನ್ನು ವಿಚಾರಸಂಕಿರಣಗಳಲ್ಲಿ ವಿನಿಮಯ ಮಾಡಿಕೊಳ್ಳಬಹುದು. ದಿನನಿತ್ಯ ಶಿಕ್ಷಕರು ಜ್ಞಾನದ ಸಂಪರ್ಕ ಸೇತುವಾಗಬಹುದು.

ಜೊತೆಗೆ, ರೈತರಿಗೆ ಸಮರ್ಪಕವಾದ ಮಾಹಿತಿಯನ್ನು ಅಡೆತಡೆಗಳಿಲ್ಲದೆ ಒದಗಿಸಬಹುದು. ರೈತರು ವಿವಿಯಿಂದ ವಿವಿಗೆ ಮಾಹಿತಿಗಾಗಿ ಅಲೆಯುವುದನ್ನು ತಪ್ಪಿಸಬಹುದು. ಸ್ನಾತಕೋತ್ತರ ಮತ್ತು ಡಾಕ್ಟರಲ್ ಅಭ್ಯರ್ಥಿಗಳು ತಮ್ಮ ಸಂಶೋಧನೆಗೆ ಅಗತ್ಯವಾದ ಮೈನರ್ ಕೋರ್ಸುಗಳನ್ನು ಇತರೆ ಕಾಲೇಜುಗಳಲ್ಲಿ ಅಭ್ಯಸಿಸಬಹುದು. ಸಮಗ್ರ ಕೃಷಿ ವಿವಿಗಳಿಂದ ರಾಜ್ಯದ ಪ್ರಗತಿಗೆ ಅನುಕೂಲವಾಗುತ್ತದೆ. ಪ್ರತಿ ವರ್ಷ ನಡೆಯುವ ರಾಷ್ಟ್ರಮಟ್ಟದ ವಿಶ್ವವಿದ್ಯಾಲಯಗಳ ಶ್ರೇಣೀಕರಣದಲ್ಲಿ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ಉತ್ತಮ ಶ್ರೇಣಿಯನ್ನು ಪಡೆಯಬಹುದು. ಕೃಷಿ ವಿಜ್ಞಾನದ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಳ್ಳಬಹುದು.

ವಿಶೇಷ ಸೂಚನೆ: ವಿವಿಧ ಕೃಷಿ ವಿಜ್ಞಾನಗಳ ಪದವಿ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಸೂಕ್ತ ಹಾಗೂ ಹೆಚ್ಚುವರಿ ಮಾಹಿತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ವಿವಿಧ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಪ್ರಕಟಣೆಗಳನ್ನು ಗಮನಿಸಲು ಕೋರಿದೆ.



ಅಪಘಾತ ವಿವಾದದಲ್ಲಿ ಹಿಂದೂ ವ್ಯಕ್ತಿಯ ಹತ್ಯೆ : ಅಹಮದಾಬಾದ್‌ನಲ್ಲಿ ಕೋಮು ಉದ್ವಿಗ್ನ -

ಅಹಮದಾಬಾದ್,ಏ.19- ಗುಜರಾತ್‌ನ ಅಹಮದಾಬಾದ್ ಜಿಲ್ಲೆಯಲ್ಲಿ ಉದ್ವಿಗ್ನತೆ ಉಂಟಾ ಗಿದ್ದು, ವಿವಿಧ ಸಮುದಾಯಗಳಿಗೆ ಸೇರಿದ ಎರಡು ಮೋಟಾರ್‌ಸೈಕಲ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ 30 ವರ್ಷದ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದು, ನಂತರ ಹಲವಾರು ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಧ್ಯಾಹ್ನ ಅಹಮದಾಬಾದ್‌ನ ಧಂಧುಕಾದಲ್ಲಿ ಈ ಘಟನೆ ನಡೆದಿದ್ದು, ಬಲಿಯಾದವರನ್ನು ಧರ್ಮೇಶ್ ಗಮಾರ ಎಂದು ಗುರುತಿಸಲಾಗಿದೆ.ಪೊಲೀಸರ ಪ್ರಕಾರ, ಗಮಾರ ಅವರ ಮೋಟಾರ್ ಸೈಕಲ್ ಮತ್ತೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಇದು ಅವರ ಮತ್ತು ಇನ್ನೊಬ್ಬ ವ್ಯಕ್ತಿಯ ನಡುವೆ ವಾಗ್ವಾದಕ್ಕೆ ಕಾರಣವಾಯಿತು. ನಂತರ ವಾಗ್ವಾದವು ಉಲ್ಬಣಗೊಂಡು ಕರೆತಂದ ಇನ್ನೊಬ್ಬ ವ್ಯಕ್ತಿ ತನ್ನ ಸಮುದಾಯದ ಸದಸ್ಯರೊಂದಿಗೆ ಗಮಾರ ಅವರ ಮನೆಗೆ ಹೋದರು. ಅವರ ನಡುವೆ ವಾಗ್ವಾದ ಮುಂದುವರೆದಂತೆ, ರಿಜ್ವಾನ್ ಎಂದು ಗುರುತಿಸಲಾದ ವ್ಯಕ್ತಿ ಗಮಾರ ಅವರ ಕಾಲಿಗೆ ಇರಿದಿದ್ದರಿಂದ ಅತಿಯಾದ ರಕ್ತದ ನಷ್ಟವುಂಟಾಗಿ ಸಾವನ್ನಪ್ಪಿದರು.

ದಂಧುಕಾ ಪಟ್ಟಣದಲ್ಲಿ ಇಬ್ಬರು ಬೈಕ್ ಅಪಘಾತದಲ್ಲಿ ಸಿಲುಕಿದ್ದರು. ಅವರಲ್ಲಿ ಒಬ್ಬರು ಮುಸ್ಲಿಂ ಸಮುದಾಯದ ಯುವಕರು ಮತ್ತು ಇನ್ನೊಬ್ಬರು ಭಾರ್ವಾಡ್ ಸಮುದಾಯದವರು. ಅವರ ನಡುವೆ ಜಗಳವಾಯಿತು, ಮತ್ತು ಮುಸ್ಲಿಂ ಸಮುದಾಯದ ಯುವಕ ತನ್ನ ಹೆಂಡತಿಯನ್ನು ಬಿಟ್ಟ ನಂತರ, ಭಾರ್ವಾಡ್ ಸಮುದಾಯದ ನಾಲ್ಕರಿಂದ ಐದು ಹುಡುಗರು ಆತನ ಮೇಲೆ ಹಲ್ಲೆ ನಡೆಸಿದರು ಎಂದು ಅಹಮದಾಬಾದ್ ಗ್ರಾಮೀಣ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಓಂ ಪ್ರಕಾಶ್ ಜಾಟ್ ಸುದ್ದಿ ಸಂಸ್ಥೆ ಎಎನ್‌ಐಗೆ ತಿಳಿಸಿದ್ದಾರೆ.

ಈ ಘಟನೆಯು ಎರಡು ಸಮುದಾಯಗಳ ನಡುವೆ ಉದ್ವಿಗ್ನತೆಯನ್ನು ಉಂಟು ಮಾಡಿತು. ಹಲವಾರು ಜನರು ಪರಸ್ಪರ ಘರ್ಷಣೆ ನಡೆಸಿ ಹಲವಾರು ಅಂಗಡಿಗಳಿಗೆ ಬೆಂಕಿ ಹಚ್ಚಿದರು. ಗುಂಪು ಬೆಂಕಿ ಹಚ್ಚಿದ ಅಂಗಡಿಗಳಿಂದ ಕಪ್ಪು ಹೊಗೆ ಏರುತ್ತಿರುವುದನ್ನು ತೋರಿಸುವ ವೀಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿವೆ.

ಆದಾಗ್ಯೂ, ಪೊಲೀಸರು ತ್ವರಿತವಾಗಿ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಹಲವಾರು ತಂಡಗಳನ್ನು ಸ್ಥಳಕ್ಕೆ ಕಳುಹಿಸಲಾಯಿತು. ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸಮೀರ್ ಮತ್ತು ರಿಜ್ವಾನ್ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಮತ್ತು ಕನಿಷ್ಠ 15 ರಿಂದ 20 ಜನರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬೆಂಕಿ ಹಚ್ಚುವಿಕೆಯಲ್ಲಿ ಭಾಗಿಯಾಗಿರುವವರನ್ನು ಗುರುತಿಸಲು ಅಧಿಕಾರಿಗಳು ಮನೆ ಮನೆಗೆ ತೆರಳಿ ತಪಾಸಣೆ ಮತ್ತು ಗಸ್ತು ತಿರುಗುತ್ತಿದ್ದಾರೆ.

ಪೊಲೀಸರು ಸಮೀರ್ ಮತ್ತು ರಿಜ್ವಾನ್ ಇಬ್ಬರನ್ನೂ ಬಂಧಿಸಿದರಲ್ಲದೆ ಬೆಂಕಿ ಹಚ್ಚಿದ ಹದಿನೈದರಿಂದ ಇಪ್ಪತ್ತು ಜನರನ್ನು ಬಂಧಿಸಿದರು. ಪರಿಸ್ಥಿತಿ ಈಗ ಶಾಂತಿಯುತವಾಗಿದ್ದು, ಪಟ್ಟಣದಾದ್ಯಂತ ಪೊಲೀಸರನ್ನು ನಿಯೋಜಿಸಲಾಗಿದೆ. ಪೊಲೀಸರು ವ್ಯಾಪಕವಾದ ಕೂಂಬಿಂಗ್ ಕಾರ್ಯಾಚರಣೆಗಳನ್ನು ನಡೆಸುತ್ತಾರೆ ಮತ್ತು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತಪ್ಪಿತಸ್ಥರೆಂದು ಕಂಡುಬಂದವರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆ ಎಂದು ಜಾಟ್ ಹೇಳಿದರು.

ಘಟನೆಯಲ್ಲಿ ಸಾವನ್ನಪ್ಪಿದ ಯುವಕರಿಗೆ ಬೆಂಬಲವಾಗಿ ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸಿದರು. ಕೆಲವು ಸಮಾಜ ವಿರೋಧಿ ಶಕ್ತಿಗಳು ಎಂಟರಿಂದ ಹತ್ತು ಅಂಗಡಿಗಳನ್ನು ಸುಟ್ಟುಹಾಕಿವೆ, ಮತ್ತು ನಾವು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಹೆಚ್ಚುವರಿಯಾಗಿ, ಕೊಲೆ ಆರೋಪಿಗಳ ವಿರುದ್ಧ ಸಾಧ್ಯವಾದಷ್ಟು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜಾಟ್ ಹೇಳಿದರು.

ಕಲ್ಲಿದ್ದಲು ಹಗರಣ : ಐಎಎಸ್ ಅಧಿಕಾರಿಯ 4 ಕೋಟಿ ಮೌಲ್ಯದ ಆಸ್ತಿ ಜಪ್ತಿ

ರಾಯ್ಪುರ್,ಏ.19- ಕಲ್ಲಿದ್ದಲು ಲೆವಿ ಹಗರಣಕ್ಕೆ ಸಂಬಂಧಿಸಿದಂತೆ ಆರೋಪಿಯಾಗಿರುವ ಅಮಾನತುಗೊಂಡ ಐಎಎಸ್ ಅಧಿಕಾರಿ ಸಮೀರ್ ವಿಷ್ಣೋಯ್ ಅವರ 4 ಕೋಟಿ ಮೌಲ್ಯದ ಆಸ್ತಿಗಳನ್ನು ಆರ್ಥಿಕ ಅಪರಾಧ ವಿಭಾಗ ಜಪ್ತಿ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ 2024ರ ಜುಲೈನಲ್ಲಿ ವಿಷ್ಣೋಯ್ ವಿರುದ್ಧ ಅಕ್ರಮ ಆಸ್ತಿ ಸಂಪಾದನೆ ಪ್ರಕರಣವನ್ನು ದಾಖಲಿಸಿತ್ತು . ತನಿಖೆಯ ವೇಳೆ, ವಿಷ್ಣೋಯ್ ಅವರ ಕುಟುಂಬ ಸದಸ್ಯರು ಹಾಗೂ ಸಂಬಂಧಿತ ಸಂಸ್ಥೆಗಳ ಹೆಸರಿನಲ್ಲಿ ಅಕ್ರಮವಾಗಿ ಸಂಪಾದಿಸಲ್ಪಟ್ಟಿವೆ ಎಂದು ಶಂಕಿಸಲಾದ ಒಟ್ಟು ಒಂಭತ್ತು ಸ್ಥಿರ ಆಸ್ತಿಗಳನ್ನು (ಸುಮಾರು 4 ಕೋಟಿ ಮೌಲ್ಯದ) ತನಿಖಾ ಸಂಸ್ಥೆ ಗುರುತಿಸಿದೆ ಎಂದು ಹೇಳಲಾಗಿದೆ.

ಈ ಆಸ್ತಿಗಳನ್ನು ಜಪ್ತಿ ಮಾಡುವಂತೆ ರಾಯ್ಪುರದಲ್ಲಿರುವ ಭ್ರಷ್ಟಾಚಾರ ತಡೆ ಕಾಯ್ದೆಯ ವಿಶೇಷ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಏ. 17ರಂದು ವಿಚಾರಣೆ ನಡೆಸಿದ ಬಳಿಕ, ನ್ಯಾಯಾಲಯವು ಎಲ್ಲಾ ಆಸ್ತಿಗಳನ್ನು ಜಪ್ತಿ ಮಾಡಲು ಆದೇಶಿಸಿದೆ, ಇದಕ್ಕೆ ಅನುಸಾರವಾಗಿ, ಭ್ರಷ್ಟಾಚಾರ ನಿಗ್ರಹ ದಳ/ಆರ್ಥಿಕ ಅಪರಾಧ ವಿಭಾಗವು ಆಸ್ತಿಗಳನ್ನು ಜಪ್ತಿ ಮಾಡಿದೆ.

ಜಪ್ತಿಯಾದ ಆಸ್ತಿಗಳನ್ನು ಮಾರಾಟ ಅಥವಾ ಹಸ್ತಾಂತರ ಮಾಡಲು ಸದ್ಯಸಾಧ್ಯವಿಲ್ಲ ಎಂದು ತಿಳಿಸಲಾಗಿದೆ.ಈ ಪ್ರಕರಣಕ್ಕೆ ಸಂಬಂಧಿಸಿ, ಜಾರಿ ನಿರ್ದೇಶನಾಲಯ (ಇಡಿ) ಹಿಂದೆಯೇ ವಿಷ್ಣೋಯ್ ಅವರಿಗೆ ಸಂಬಂಧಿಸಿದ ಐದು ಸ್ಥಿರ ಆಸ್ತಿಗಳನ್ನು ತಾತ್ಕಾಲಿಕವಾಗಿ ಜಪ್ತಿ ಮಾಡಿತ್ತು.

ಇದಲ್ಲದೆ, ಇತರ ಸಾರ್ವಜನಿಕ ಅಧಿಕಾರಿಗಳ ವಿರುದ್ಧವೂ ಕ್ರಮಗಳು ಮುಂದುವರಿದಿವೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಉಪ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ ಸೌಮ್ಯ ಚೌರಾಸಿಯಾ ಅವರಿಗೆ ಸಂಬಂಧಿಸಿದ ಆಸ್ತಿಗಳ ಮೇಲೂ ಕ್ರಮ ಕೈಗೊಳ್ಳಲಾಗಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.

2009 ಬ್ಯಾಚ್‌ನ ಐಎಎಸ್ ಅಧಿಕಾರಿಯಾದ ವಿಷ್ಣೋಯ್ ಅವರನ್ನು 2022ರಲ್ಲಿ ಈ ಕಲ್ಲಿದ್ದಲು ಲೆವಿ ಹಗರಣದ ಸಂಬಂಧ ಮೊದಲ ಬಾರಿಗೆ ಬಂಧಿಸಿತ್ತು. ಬಳಿಕ ಕಳೆದ ವರ್ಷ ಸುಪ್ರೀಂ ಕೋರ್ಟ್ ಅವರಿಗೂ ಸೇರಿದಂತೆ ಹಲವು ಆರೋಪಿಗಳಿಗೆ ಜಾಮೀನು ನೀಡಿತ್ತು.

ಈ ಪ್ರಕರಣವು ಜುಲೈ 2020ರಿಂದ ಜೂನ್ 2022ರವರೆಗೆ ನಡೆದಿದ್ದ ಅಂದಾಜು 540 ಕೋಟಿ ಮೌಲ್ಯದ ಅಕ್ರಮ ಜಾಲಕ್ಕೆ ಸಂಬಂಧಿಸಿದ್ದು, ರಾಜ್ಯದಲ್ಲಿ ಸಾಗಾಟವಾಗುವ ಪ್ರತೀ ಟನ್ ಕಲ್ಲಿದ್ದಲಿಗೆ 25ರ ಅಕ್ರಮ ಲೆವಿ ವಸೂಲಿ ಮಾಡಲಾಗುತ್ತಿತ್ತು ಎಂಬ ಆರೋಪ ಇದೆ. ಇದರಲ್ಲಿ ಹಿರಿಯ ಅಧಿಕಾರಿಗಳು, ವ್ಯಾಪಾರಿಗಳು, ರಾಜಕೀಯ ನಾಯಕರು ಮತ್ತು ಮಧ್ಯವರ್ತಿಗಳ ಭಾಗಿಯಾಗಿದ್ದರೆಂದು ಆರೋಪಿಸಲಾಗಿದೆ.

ಒಂದನೇಯ ಪುಟದಿಂದ

ವಾಸವಿ ಜಯಂತಿ ವಿಜೃಂಭಣೆಯಿಂದ ಆಚರಣೆ-ಸಾವಿತ್ರಿ ಪ್ರರುಷೋತ್ತಮ

ಪ್ರೀತಿಯ ಭೋಜನ ಹಾಗೂ ರಾತ್ರಿ ಮೆರವಣಿಗೆ ನಂತರ ಪ್ರೀತಿಯ ಭೋಜನ ವ್ಯವಸ್ಥೆ ಮಾಡಲಾಗಿದೆ ಎಂದರು.

ವಿಶೇಷವಾಗಿ ಈ ಬಾರಿ ಆರ್ಯ ವೈಶ್ಯ ಸಮಾಜದ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ದಿನಾಂಕ 25- ಶನಿವಾರ ರಂದು ಬೆಳಿಗ್ಗೆ 9 ರಿಂದ 1 ಗಂಟೆ ವರೆಗೆ ಆಯೋಜಿಸಲಾಗುವುದೆಂದರು.

ದಿ.26 ರವಿವಾರರಂದು ವಾಸವಿ ಜಯಂತಿ ದಿನ

ವಿಶೇಷವಾಗಿ ಉಡುಪಿ ರವಿಕಿರ ಣಾಚಾ ರ್ ಇವರಿಂದ ದರ್ಶನ ನೃತ್ಯ ಪ್ರದರ್ಶನ ನಡೆಯಲಿದೆ.ವಾಸವಿ ಜಯಂತಿ ನಿಮಿತ್ಯ ದೇವಸ್ಥಾನ ಹಾಗೂ ದೇವರಿಗೂ ವಿಶೇಷ ಹೂವಿನ , ವಿದ್ಯುತ್ ಲೈಟ್ ಗಳ ಅಲಂಕಾರ ಮಾಡಲಾಗುತ್ತದೆ,

ವಾಸವಿ ಕ್ಲಬ್ ರಾಯಚೂರು ಇವರಿಂದ ಬೈಕ್ ರಾಲಿದಿನಾಂಕ 26ರಂದು ಬೆಳಿಗ್ಗೆ 8ಗಂಟೆಗೆ ಶ್ರೀ ನಗರೇಶ್ವರ ದೇವಸ್ಥಾ ನದಿಂದ ತೀನ್‌ಕಂದಿಲ್, ಸ್ಟೇಷನ್ ಸರ್ಕಲ್.ಅಂಬೇಡ್ಕರ್ ಸರ್ಕಲ್, ಬಸವೇಶ್ವರ ಸರ್ಕಲ್, ಗಾಂಧಿ ಚೌಕ್, ಚಂದ್ರಮೌಳೇಶ್ವರ ಸರ್ಕಲ್. ಬಸವಭಾವಿ ಚೌಕ್, ಸಿಟಿ ಟಾಕೀಸ್ ಸರ್ಕಲ್, ನಗರೇಶ್ವರ ದೇವಸ್ಥಾನ ಬೈಕ್ ರ್ಯಾಲಿ ಬಂದು ಸೇರುವುದು ಎಂದರು.ಈ ಬಾರಿ 10ನೇ ವರ್ಷದ ನಿಮಿತ್ಯ ವಿಶೇಷವಾಗಿ ಮಹಿಳೆಯ ರಿಗೆ ಪ್ರತಿ ದಿನ ಕುಂಕುಮಾರ್ಚನೆಯ ನಂತರ ಮರದ ಬಾಗಿಣವನ್ನು ಕೊಡಲಾಗುವುದೆಂದರು.

ವಾಸವಿ ಜಯಂತಿಯ ಈ ಎಲ್ಲಾ ಕಾರ್ಯಕ್ರಮಗಳಿಗೆ ಸಮಸ್ತ ಆರ್ಯ ವೈಶ್ಯ ಬಾಂಧವರು, ಮಹಿಳೆಯರು,ಯುವಕ - ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದರ್ಶನ, ತೀರ್ಥ.ಪ್ರಸಾದ ಸ್ವೀಕರಿಸಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕೆಂದು ಕೋರಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಚಿಗರಂಜಟ್ಲ ಪದ್ಮರಾಜ ಉಪಾಧ್ಯಕ್ಷರರಾದ ಬಿ.ಜಗದೀಶ ಗುಪ್ತಾ,ನೆಲ್ಲೂರು ಶ್ರೀನಿವಾಸ,ಬಿ.ಗೋವಿಂದ್ ಕಾನೂನು ಸಲಹೆಗಾರರರು ಕೆ.ಸಿ. ವೀರೇಶ,ದೇವನಪಲ್ಲಿ ವೆಂಕಣ್ಣ ಶೆಟ್ಟ,ಜಾಗಿ ವೆಂಕಟೇಶ, ಎ.ಆರ್.ದತ್ತಾತ್ರೇಯ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕೆರೆ -ಸರ್ಕಾರಿ ಭೂಮಿ ಒತ್ತುವರಿ: ಕ್ರಮ ಕೈಗೊಳ್ಳದಿದ್ದರೆ ಹೋರಾಟಕ್ಕೆ ಎಚ್ಚರಿಕೆ

ಸರ್ಕಾರಿ ಜಮೀನು ಹಾಗೂ ಕೆರೆಗಳನ್ನು ಬಯಲಾಗಿ ಅತಿಕ್ರಮಿಸಿ ಕಟ್ಟಡ ನಿರ್ಮಾಣವಾಗುತ್ತಿರುವಾಗ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ಏನು ಮಾಡುತ್ತಿದೆ ಎಂಬ ಪ್ರಶ್ನೆಯನ್ನು ಸಾರ್ವಜನಿಕರು ಕೇಳುತ್ತಿದ್ದಾರೆ. ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲೇಖಿಸುವ ಅಧಿಕಾರಿಗಳು ಇಂತಹ ಅತಿಕ್ರಮಣ ತಡೆಯುವಲ್ಲಿ ಯಾಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದರು.

ಅವರು ಮುದುವರಿದು ಕೆ.ಈ. ಕುಮಾರ್ ಇವರು

ಈ ಹಿಂದೆ ದಿ.24-11-2017ರಂದು ಆಗಿನ ಜಿಲ್ಲಾಧಿಕಾರಿಗಳಾದ ಬಗಾದಿ ಗೌತಮ ಹಾಗೂ ವೆಂಕಟೇಶ ಅವರು ಸಂತೋಷ ಚಿತ್ರಮಂದಿರ ತೆರವುಗೊಳಿಸಲು ಆದೇಶಿಸಿದ್ದರೂ, ಅದರ ಮುಂದಿನ ಕ್ರಮದ ಬಗ್ಗೆ ಯಾವುದೇ ಮಾಹಿತಿ ಲಭ್ಯವಿಲ್ಲ. ತಹಶೀಲ್ದಾರರ ನೇತೃತ್ವದಲ್ಲಿ ನಡೆದ ಸರ್ವೆಯ ವರದಿಯೂ ಬಹಿರಂಗವಾಗಿಲ್ಲ ಎಂದು ಹೇಳಿದರು.

ವಾರ್ಡ್ 30 ಮತ್ತು 31ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಅನೇಕ ಬಡ ಕುಟುಂಬಗಳು ನಿವೇಶನವಿಲ್ಲದೆ ಬಾಡಿಗೆ ಮನೆಗಳಲ್ಲಿ ಜೀವನ ನಡೆಸುತ್ತಿವೆ. ಇಂತಹ ಕುಟುಂಬಗಳಿಗೆ ಸರ್ಕಾರದ ಜಮೀನು ಹಂಚಿಕೆ ಮಾಡುವ ಬದಲು ಅಕ್ರಮವಾಗಿ ಒತ್ತುವರಿ ನಡೆಯುತ್ತಿರುವುದು ಅನ್ಯಾಯ ಎಂದು ಹೇಳಿದರು.

ಸರ್ಕಾರಿ ಜಮೀನನ್ನು ಗುರುತಿಸಿ ಭೂಗಳ್ಳರನ್ನು ತೆರವುಗೊಳಿಸಿ, ಬಡವರಿಗೆ 2030 ಅಳತೆಯ ನಿವೇಶನಗಳನ್ನು ನೀಡಬೇಕು ಎಂದು ಒತ್ತಾಯಿಸಿದರು. 10 ದಿನಗಳೊಳಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ ಸ್ಥಳೀಯ ನಿವಾಸಿಗಳೊಂದಿಗೆ ಹೋರಾಟಕ್ಕೆ ಮುಂದಾಗುವುದಾಗಿ ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸೈಯದ್ ಶಂಶುದ್ದಿನ್ ಕಮಾಂಡ್ರ, ಗಂಗಾಧರ, ವೈ. ಈರಣ್ಣ, ಬಿ. ಅಂಜಿನಯ್ಯ, ವಿನೋದ್ ರಾಜ್, ಉರುಕುಂದ ಸಿಯಾತಲಾಬ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಎಸ್ಸಿ ಪಿ-ಟಿಎಸ್ಪಿ ಯೋಜನೆಯಡಿ ರೈತರಿಗೆ ಪಂಪ್,ಮೋಟಾರ್ ವಿತರಣೆ

ಸಂಸ್ಥಾನ ಮಠದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ಶನಿವಾರ ಆಯೋಜಿಸಿದ್ದ ಎಸ್ಸಿ ಪಿ-ಟಿಎಸ್ಪಿ ಯೋಜನೆಯಡಿ 2025-26ನೇ ಸಾಲಿನಲ್ಲಿ 100 ಜನ ಎಸ್'ಸಿ-ಎಸ್'ಟಿ ರೈತರಿಗೆ ಕೊಳವೆ ಭಾವಿಗಳಿಗೆ ಸಂಬಂಧಿಸಿದ ಪಂಪ್ ಹಾಗೂ ಮೋಟಾರ್ ಸಾಮಾಗ್ರಿಗಳನ್ನು ವಿತರಿಸಿ ಮಾತನಾಡಿದರು.

ಸಿರವಾರ ತಾಲೂಕಿನ ಎಸ್'ಸಿ-ಎಸ್'ಟಿ ಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಸಣ್ಣ ನೀರಾವರಿ ಇಲಾಖೆಯ (ಎಸ್ಸಿ ಪಿ-ಟಿಎಸ್ಪಿ) ಯೋಜನೆಯ ಅನುದಾನಲ್ಲಿ ಒಟ್ಟು 348 ಕೊಳವೆ ಭಾವಿಗಳನ್ನು ಕೊರೆಯಲು ಗುರಿ ಹೊಂದಿದ್ದು, ಈಗಾಗಲೇ 100ಕ್ಕೂ ಹೆಚ್ಚು ಕೊಳವೆ ಭಾವಿಗಳನ್ನು ಕೊರೆದಿದ್ದು ಬಾಕಿಯಿರುವ ಕೊಳವೆ ಭಾವಿಗಳನ್ನು ಆದಷ್ಟು ಶೀಘ್ರವೇ ಕೊರೆದು ನೀರಿನ ಸೌಲಭ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಶಾಸಕರಾದ ಜಿ.ಹಂಪಯ್ಯನಾಯಕ ಮಾತನಾಡಿ ಸಣ್ಣ ನೀರಾವರಿ ಸಚಿವರಾದ ಎನ್ ಎಸ್ ಬೋಸರಾಜು ಅವರು ನನ್ನ ಕ್ಷೇತ್ರದಲ್ಲಿ ಅತೀ ಹೆಚ್ಚು ಚೆಕ್ ಡ್ಯಾಮ್ ನಿರ್ಮಿಸಿ ಅಂತರ್ಜಲ ವೃದ್ದಿ ಮಾಡಿ, ಬೋರ್ ವೇಲ್ ಕೊರಿಸಿ, ಸಾಮಗ್ರಿಗಳನ್ನು ನೀಡುವ ಮೂಲಕ ಆದುನಿಕ ಭಗಿರಥರಾಗಿದ್ದಾರೆ. ಸಣ್ಣ ನೀರಾವರಿ ಇಲಾಖೆಯಿಂದ ಸಣ್ಣ ರೈತರಿಗೆ ಅನುಕೂಲವಾಗಿದೆ ಎಂದರು.

ಈ ಸಂದರ್ಭದಲ್ಲಿ ನವಲಕಲ್ ಬೃಹನ್ಮಠದ ಅಭಿನವ ಸೋಮನಾಥ ಶಿವಾಚಾರ್ಯರು, ಲಿಂಗಸೂಗೂರು ಮಾಜಿ ಶಾಸಕ ಡಿ.ಎಸ್.ಹೂಲಗೇರಿ, ಹಿರಿಯ ಮುಖಂಡರಾದ ಚುಕ್ಕಿ ಸೂಗಪ್ಪ ಸಾಹುಕಾರ, ಪಂಚ ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ಬ್ರಿಜೇಶ್ ಪಾಟೀಲ್, ಶರಣಯ್ಯ ನಾಯಕ ಗುಡದಿನ್ನಿ, ತಹಸೀಲ್ದಾರ್ ಅಶೋಕ ಪವಾ್ರ, ಸಣ್ಣ ನೀರಾವರಿ ಇಲಾಖೆ ಎಇಇ ಲೋಕೇಶ್, ತಾ.ಪಂ ಇಒ ಶಶಿಧರ್ ಸ್ವಾಮಿ, ಪ.ಪಂ.ಅಧ್ಯಕ್ಷ ಹಾಜಿ ಚೌದ್ರಿ, ಜಿ.ಪಂ.ಮಾಜಿ ಸದಸ್ಯ ಕಿರಿಲಿಂಗಪ್ಪ ಕವಿತಾಳ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚುಕ್ಕಿ ಶಿವಕುಮಾರ ಸಾಹುಕಾರ, ಮುಖಂಡರಾದ ಬಸವರಾಜ್ ಪಾಟೀಲ್ ಅತ್ತನೂರು, ಪ.ಪಂ ಮಾಜಿ ಅಧ್ಯಕ್ಷ ವೈ ಭೂಪನ ಗೌಡ, ಪ.ಪಂ.ಸದಸ್ಯ ಹಸನ್ ಅಲಿ ಸಾಬ್, ಎನ್.ರೇಣುಕಾ, ಅಮರೇಗೌಡ ಹಂಚಿನಾಳ, ಚಂದ್ರು ಕಳಸ, ಎಚ್.ಕೆ. ಅಮರೇಶ, ಗಂಗಪ್ಪ ದಿನ್ನಿ, ಶಿವರಾಜ ಹಣಗಿ, ಶ್ರೀನಿವಾಸ್ ಜಾಲಾಪುರ ಕ್ಯಾಂಪ್, ತಿಪ್ಪಯ್ಯ ಸ್ವಾಮಿ ಕವಿತಾಳ, ರುದ್ರಪ್ಪ ಅಂಗಡಿ, ದಾನನಗೌಡ, ನಾಗಪ್ಪ ನವಲಕಲ್, ಅಬ್ರಹಾಂ ಹೊನ್ನಟಗಿ, ಜಯಪ್ಪ ಕೆಂಪು, ಪ್ರಭಾಕರ್ ಹರನಹಳ್ಳಿ, ಮಲ್ಲಪ್ಪ ದೊಡ್ಡಮನೆ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

ಜಿಲ್ಲಾ ಆರೋಗ್ಯ ಸಂಘದ ಸಮನ್ವಯ ಸಮಿತಿ ಸಭೆ ಕುಡಿಯುವ ನೀರಿನ ಪರೀಕ್ಷೆ ಕಡ್ಡಾಯವಾಗಿ ಮಾಡಿ: ಈಶ್ವರ ಕುಮಾರ

ವಾರ್ಡ್ ಸಿದ್ದಪಡಿಸಬೇಕೆಂದರು ಸಂಬಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸುರಕ್ಷಿತ ಆಹಾರ ಸೇವನೆಗೆ ಜಾಗೃತಿ : ಬೇಸಿಗೆ ಹಿನ್ನಲೆಯಲ್ಲಿ ನೀರಿನ ಮೂಲಗಳನ್ನು ನಿಯಮಿತವಾಗಿ ಪರೀಕ್ಷೆ ಹಾಗೂ ಅಸುರಕ್ಷಿತವೆಂದು ಕಂಡು ಬರುವ ಮೂಲಗಳನ್ನು ನಿಯಮಾನುಸಾರ ಕ್ಲೋರಿನೇಷನ್ ಮಾಡಿಸಲು ಎಲ್ಲ ಗ್ರಾಮ ಪಂಚಾಯತಗಳು, ಸ್ಥಳೀಯ ಸಂಸ್ಥೆಗಳೊದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ ಯಾವುದೇ ಅವಘಡ ಸಂಭವಿಸಿದತೆ ಹಾಗೂ ಮುಂಜಾಗೃತಾ ಕ್ರಮಗಳ ಬಗ್ಗೆ ಜನಜಾಗೃತಿ ನೀಡಲು ಹಾಗೂ

ಊಟದ ಮೊದಲು ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವನೆ ಬಗ್ಗೆ ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಲು ವ್ಯಾಪಕ ಪ್ರಚಾರ ಕೈಗೊಳ್ಳಬೇಕೆಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಮಾತನಾಡಿ, ಈಗಾಗಲೇ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಓಆರ್‌ಎಸ್ ಪ್ಯಾಕೇಟ್ ಹಾಗೂ ತುರ್ತು ಔಷಧಿಗಳನ್ನು ದಾಸ್ತಾನು ಮಾಡಲಾಗಿದೆ. ತುರ್ತು ಸಂದರ್ಭದಲ್ಲಿ 108ಕ್ಕೆ ಕರೆ ಮಾಡಿ ಆ್ಯಂಬ್ಯುಲೆನ್ಸ್ನ ಸದುಪಯೋಗಕ್ಕಾಗಿ ನಿರಂತರ ಜಾಗೃತಿ ನೀಡಲಾಗುತ್ತಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಶಸ್ತ ಚಿಕಿತ್ಸ ಕ ಡಾ.ವಿಜಯ ಶಂಕ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನವೀನ್‌ಕುಮಾ್ರ, ಆರ್‌ಸಿಹೆಚ್ ಅಧಿಕಾರಿ ಡಾ.ನಂದಿತಾ ಎಮ್.ಎನ್., ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರ್‌ಗೌಡ, ಡಿಪಿಡಿಓ ಡಾ.ಚಂದ್ರಶೇಖರಯ್ಯ ಸ್ವಾಮಿ, ಡಿಎಸ್‌ಓ ಹಾಗೂ ಡಿಪಿಎಮ್‌ಓ ಡಾ.ಗಣೇಶ್ ಕೆ., ಎನ್‌ಪೋರ್ಸ್ಮೆಂಟ್ ಅಧಿಕಾರಿ ಡಾ.ಶಿವಕುಮಾರ್ ನಾರಾ, ಡಿಟಿಓ ಡಾ.ಮಹಮ್ಮದ್ ಶಾಕೀರ್ ಮೋಹಿಯುದ್ದೀನ್, ನಿರೂಪಣಾಧಿಕಾರಿ ಡಾ.ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

ಡಾ.ಬಿ. ಆರ್ ಅಂಬೇಡ್ಕರ -ಡಾ ಬಾಬು ಜಗಜೀವನ್ ರಾಮ್ ಸ್ತಬ್ಧಚಿತ್ರ ಮೆರವಣಿಗೆ

ನಮ್ಮಲ್ಲಿ ಅಳವಡಿಸಿಕೊಳ್ಳೋಣ, ಯುವಜನತೆ ಮತ್ತು ನಾವು ನೀವೆಲ್ಲರೂ ಅರಿತುಕೊಂಡು ಸಮಾಜದಲ್ಲಿ ಬದುಕಬೇಕಿದೆ ಎಂದು ಹೇಳಿದರು

ಈ ಸಂದರ್ಭದಲ್ಲಿ ಬಸವರಾಜ ಸೂಗರಾಳ ಮ್ಯಾತ್ರಿ, ಯಂಕಪ್ಪ ಮಾನಸಗಲ್, ಹನುಮಂತ ಗಂಡೋಳಿ, ಪೇತ್ರಪ್ಪ ಕೊಪ್ಪರ,ಮಲ್ಲಪ್ಪ ಹೆಂಬೆರಾಳ, ಬಸವರಾಜ ಗುಡಿ,ಬಾಲುರೆಡ್ಡಿ ಕರಿಗುಡ್ಡ, ರಂಗನಾಥ ಮ್ಯಾತ್ರಿ, ಮಲ್ಲಿಕಾರ್ಜುನ ಸುಗರಾಳ ಮ್ಯಾತ್ರಿ , ಮಲ್ಲಿಕಾರ್ಜುನ ಐವಳೆ ಕೊಪ್ಪರ, ಸಿದ್ದು ಮ್ಯಾತ್ರಿ, ಹನುಮಂತ ಮ್ಯಾತ್ರಿ ಬೆಂಗಳೂರು ಮೇಸ್ತ್ರಿ, ಯಲ್ಲಪ್ಪ ಮ್ಯಾತ್ರಿ, ಶಶಿಕುಮಾರ್ ಮ್ಯಾತ್ರಿ ಕೊಪ್ಪರ, ಯೇಸು ಮನಗಾರ, ಪ್ರಕಾಶ್ ಮನಗಾರ, ನಾಗರಾಜ್ ಮ್ಯಾತ್ರಿ, ಬಸವಂತ ಮ್ಯಾತ್ರಿ, ನಾಗರಾಜ್ ಗುಡಿ ಮ್ಯಾತ್ರಿ , ಗಣೇಶ ಸುಲ್ತಾನಪುರು, ಸುನಿಲ್ ಸುಲ್ತಾನಪುರು, ಭೀಮರಾಜ್ ಮ್ಯಾತ್ರಿ , ರವಿ ಮ್ಯಾತ್ರಿ, ಇನ್ನಿತರ ಯುವನಾಯಕರ ನೇತೃತ್ವದಲ್ಲಿ ಜಯಂತಿಯನ್ನು ಅತ್ಯಂತ ಸಡಗರದಿಂದ ಆಚರಿಸಲಾಯಿತು.

ಗ್ರಾಮದ ಯುವನಾಯಕರ ಶ್ರಮ ಈ ಬಾರಿ ಮೆರವಣಿಗೆಯು ಹಬ್ಬದ ವಾತಾವರಣವನ್ನು ಸೃಷ್ಟಿಸಿತ್ತು. ಕೊಪ್ಪರ ಗ್ರಾಮದ ಯುವನಾಯಕರು ಒಂದಾಗಿ ಸೇರಿ, ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡು ಈ ಅದ್ದೂರಿ ಮೆರವಣಿಗೆ ನೆರವೇರಲು ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಡಿ ಜೆ ಮೂಲಕ ಯುವಕರು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸಿದರು ಕೆಲ ಯುವಕರು ನೀಲಿ ಪೇಟ ತೊಟ್ಟು, ಘೋಷಣೆಗಳನ್ನು ಕೂಗುತ್ತಾ ಮಹನೀಯರಿಗೆ ಗೌರವ ಸಲ್ಲಿಸಲಾಯಿತು.

ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಬಿಸಿ ಗಾಳಿ ಎಚ್ಚರಿಕೆ: ಹಲವೆಡೆ ಗುಡುಗು ಸಹಿತ ಆಲಿಕಲ್ಲು ಮಳೆ ಮುನ್ಸೂಚನೆ

ಬೆಂಗಳೂರು,ಏ.19-

ರಾಜ್ಯದ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡದಲ್ಲಿ ಇಂದೂ ಸಹ ಬಿಸಿ ಗಾಳಿ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಉತ್ತರ ಒಳನಾಡಿನ ಬೆಳಗಾವಿ, ಬಾಗಲಕೋಟೆ, ಕಲಬುರ್ಗಿ ಮತ್ತು ವಿಜಯಪುರದಲ್ಲಿ ಗುಡುಗು ಸಹಿತ ಆಲಿಕಲ್ಲು ಮಳೆ ನಿರೀಕ್ಷಿಸಲಾಗಿದ್ದು, ಉಳಿದ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರೆಯಲಿದೆ. ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಆಲಿಕಲ್ಲು ಮಳೆ ನಿರೀಕ್ಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ಕೊಟ್ಟಿದೆ.

ಬೆಂಗಳೂರು ಸೇರಿದಂತೆ ಹಲವೆಡೆ ಮುಂದಿನ 2 ದಿನಗಳಲ್ಲಿ



ತಾಪಮಾನ ಮತ್ತಷ್ಟು ಏರಿಕೆಯಾಗಬಹುದು ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಮುಂಬರುವ ದಿನಗಳಲ್ಲಿ ಕರಾವಳಿ ಹಾಗೂ ಉತ್ತರ ಒಳನಾಡು ಜಿಲ್ಲೆಗಳಲ್ಲಿ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗೆ ಏರುವ ಸಾಧ್ಯತೆಯಿದೆ. ಹೀಗಾಗಿ ಬೆಳಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಅನಗತ್ಯವಾಗಿ ಬಿಸಿಲಿನಲ್ಲಿ ಓಡಾಡದಿರುವುದು ಹಾಗೂ ಹೆಚ್ಚು ನೀರು ಸೇವನೆ ಮಾಡುವುದು ಆರೋಗ್ಯಕ್ಕೆ ಉತ್ತಮ ಎಂದು ವೈದ್ಯರು ಸಲಹೆ ನೀಡಿದ್ದಾರೆ.

ಉಷ್ಣಾಘಾತದಿಂದ ರಕ್ಷಿಸಿಕೊಳ್ಳಲು ನಿಯಮಿತವಾಗಿ ನೀರು ಕುಡಿಯಿರಿ. ಎಳನೀರು, ಮಜ್ಜಿಗೆ ಅಥವಾ ಮನೆಯಲ್ಲಿ ತಯಾರಿಸಿದ ಹಣ್ಣಿನ ರಸಗಳನ್ನು ಸೇವಿಸಿ. ತಿಳಿ ಬಣ್ಣದ, ಸಡಿಲವಾದ ಹತ್ತಿ ಬಟ್ಟೆಗಳನ್ನು ಧರಿಸಿ. ಹೊರಗೆ ಹೋಗುವಾಗ ಛತ್ರಿ ಅಥವಾ ಟೋಪಿಯನ್ನು ಬಳಸಿ. ಕೆಫೀನ್ (ಕಾಫಿ/ಟೀ) ಮತ್ತು ಹೆಚ್ಚಿನ ಸಕ್ಕರೆಯುಕ್ತ ಪಾನೀಯಗಳ ಸೇವನೆ ಕಡಿಮೆ ಮಾಡುವಂತೆ ವೈದ್ಯರು ತಿಳಿಸಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ: ಈ ಬಾರಿ ಎಪ್ರಿಲ್‌ನಿಂದ ಜೂನ್ ತಿಂಗಳವರೆಗೆ ದೇಶಾದ್ಯಂತ ಹವಾಮಾನವು ಅತ್ಯಧಿಕ ಉಷ್ಣಾಂಶದಿಂದ ಕೂಡಿರಲಿದೆ. ಪೂರ್ವ, ಈಶಾನ್ಯ ಮತ್ತು ಉತ್ತರದ ರಾಜ್ಯಗಳಲ್ಲಿ ಹಗಲಿನ ತಾಪಮಾನವು ಸಾಮಾನ್ಯಕ್ಕಿಂತ ಗರಿಷ್ಠ ಮತ್ತು ಹೆಚ್ಚಿನ ಅವಧಿಯ ಶಾಖದ ಅಲೆಗಳಿಂದ ಕೂಡಿರುವ ಸಾಧ್ಯತೆಗಳಿವೆ ಎಂದು ಇತ್ತೀಚೆಗೆ ಭಾರತೀಯ ಹವಾಮಾನ ಇಲಾಖೆ () ಮುನ್ಸೂಚನೆ ನೀಡಿತ್ತು.

ಮಧ್ಯ ಭಾರತದ ಕೆಲವು ಭಾಗಗಳನ್ನು ಹೊರತುಪಡಿಸಿ ದೇಶದ ಹೆಚ್ಚಿನ ಭಾಗಗಳಲ್ಲಿ ರಾತ್ರಿಯ ಅಥವಾ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರಬಹುದು. ಮಾರ್ಚ್-ಮೇ ಋತುಮಾನದ ಮುನ್ಸೂಚನೆ ಪ್ರಕಾರ, ಪೂರ್ವ ಮತ್ತು ಈಶಾನ್ಯ ರಾಜ್ಯಗಳಲ್ಲಿ ಮಾರ್ಚ್ ತಿಂಗಳಿನಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆ ದಾಖಲಾಗಿದೆ. ಎಪ್ರಿಲ್ 2026ರಲ್ಲಿ, ಒಡಿಶಾ, ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೇರಿ ಮತ್ತು ಆಂಧ್ರಪ್ರದೇಶದ ಕರಾವಳಿ ಪ್ರದೇಶಗಳು ಮತ್ತು ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದ ಪ್ರತ್ಯೇಕ ಪ್ರದೇಶಗಳ ಅನೇಕ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಯ ದಿನಗಳು ಎದುರಾಗಲಿವೆ ಎಂದು ಐಎಂಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿತ್ತು.

ಶಾಖದ ಅಲೆಯ ಪರಿಸ್ಥಿತಿಗಳ ಹೆಚ್ಚಳವು ಸಾರ್ವಜನಿಕ ಆರೋಗ್ಯ, ಜಲ ಸಂಪನ್ಮೂಲಗಳು, ವಿದ್ಯುತ್ ಬೇಡಿಕೆ ಮತ್ತು ಅಗತ್ಯ ಸೇವೆಗಳಿಗೆ ಗಮನಾರ್ಹ ಅಪಾಯಗಳನ್ನುಂಟು ಮಾಡಬಹುದು. ವಿಶೇಷವಾಗಿ ವೃದ್ಧರು, ಮಕ್ಕಳು, ಹೊರಗಡೆ ಕೆಲಸ ಮಾಡುವವರು ಮತ್ತು ಅನಾರೋಗ್ಯ ಸಮಸ್ಯೆ ಹೊಂದಿರುವವರು ಎಚ್ಚರಿಕೆ ವಹಿಸುವಂತೆ ಐಎಂಡಿ ಸೂಚನೆ ನೀಡಿತ್ತು.

ಜಿಲ್ಲಾಧಿಕಾರಿ ಕಚೇರಿ ಎಸ್. ಡಿ. ಎ., ಕಂಪ್ಯೂಟರ್ ಆಪರೇಟರ್ ಲೋಕಾಯುಕ್ತ ಬಲೆಗೆ

ವಿಜಯಪುರ,ಏ.18:ಜಿಲ್ಲಾಧಿಕಾರಿ ಕಚೇರಿ ಎಸ್. ಡಿ. ಎ. ಹಾಗೂ ಕಂಪ್ಯೂಟರ್ ಆಪರೇಟರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದು, ಇಬ್ಬರನ್ನು ಲೋಕಾಯುಕ್ತ ಪೆಲೀಸರು ಬಂಧಿಸಿದ್ದಾರೆ.

ಜಿಲ್ಲಾಡಳಿತ ಕಚೇರಿಯ ಎಸ್ ಡಿ ಎ ಅರವಿಂದ ಪವಾರ

ಗುತ್ತಿಗೆ ಆಧಾರದಲ್ಲಿ ಸೇವೆ ಮಾಡುವ ಕಂಪ್ಯೂಟರ್ ಆಪರೇಟರ್ ಅಯ್ಯುಬ್ ತೊನಶ್ಯಾಳ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಪೆಟ್ರೋಲ್ ಬಂಕ್ ಜಾಗದ ನಕಾಶೆ ಆನ್ ಲೈನ್ ನಲ್ಲಿ ಮಾಡಲು ಲಂಚ ಡಿಮಾಂಡ್ ಮಾಡಿ

15,000 ನಗದು ಸ್ವೀಕಾರ ಮಾಡುವ ವೇಳೆ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಬಿದ್ದ ಎಸ್ ಡಿ ಎ ಅರವಿಂದ ಹಾಗೂ ಕಂಪ್ಯೂಟರ್ ಆಪರೇಟರ್ ಅಯ್ಯೂಬ್ ಇಬ್ಬರನ್ನೂ ಲೋಕಾಯುಕ್ತ ಪೆಲೀಸರು ಬಂಧಿಸಿದ್ದಾರೆ.

ಲೋಕಾಯುಕ್ತ ಎಸ್ಪಿ ಟಿ. ಮಲ್ಲೇಶ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ.ಇನ್ಸ ಪೆಕ್ಟರ್ ಆನಂದ ಟಕ್ಕಣ್ಣನವರ ಹಾಗೂ ಇತರೆ ಅಧಿಕಾರಿಗಳು ದಾಳಿಯಲ್ಲಿ ಭಾಗಿಯಾಗಿದ್ದರು.

ಜೆಡಿಎಸ್ ಪಕ್ಷದ ಕಾರ್ಯಕರ್ತನ ಅಸಮಾಧಾನ : ಸಕ್ರಿಯ ಕಾರ್ಯಕರ್ತ ಪರಶುರಾಮ್ ಬಾಗಲವಾಡ ರಾಜೀನಾಮೆ

ಮಾನ್ವಿ,ಏ.18-

ತಾಲ್ಲೂಕಿನ ಜೆಡಿಎಸ್ ಪಕ್ಷದ ನಿಷ್ಠಾವಂತ ಹಾಗೂ ಸಕ್ರಿಯ ಕಾರ್ಯಕರ್ತರಾಗಿದ್ದ ಪರಶುರಾಮ್ ಬಾಗಲವಾಡ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ಕಳೆದ ಮೂರು ವರ್ಷಗಳಿಂದ ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಸಂಘಟ ನೆಗಾಗಿ ಅವಿರತವಾಗಿ ದುಡಿದು ಸುಮಾರು 15 ವರ್ಷ ನಿಸ್ವಾರ್ಥವಾಗಿ ರಾಜಾ ವೆಂಕಟಪ್ಪ ನಾಯಕರು ಶಾಸಕರಾಗುವಲ್ಲಿ ಶ್ರಮಿಸಿದ್ದಾರೆ, ಇತ್ತೀಚಿನ ದಿನಗಳಲ್ಲಿ ಪಕ್ಷದೊಳಗಿನ ಕೆಲವು ನಾಯಕರ ನಡೆ ಹಾಗೂ ಸಿದ್ಧಾಂತಗಳಲ್ಲಿನ ಬದಲಾವಣೆಗಳಿಂದ ಬೇಸತ್ತು ಈ ತೀರ್ಮಾನ ಕೈಗೊಂಡಿದ್ದಾರೆ ಎಂದು ತಿಳಿದುಬಂದಿದೆ.

ರಾಜೀನಾಮೆ ಕುರಿತು ಮಾತನಾಡಿದ ಪರಶುರಾಮ್ ಬಾಗಲವಾಡ ಅವರು, ಪಕ್ಷದ ಸಂಕಷ್ಟದ ಸಮಯದಲ್ಲಿ ನಿಷ್ಠೆಯಿಂದ ಕೆಲಸ ಮಾಡಿದ್ದೇನೆ. ಆದರೆ ಪ್ರಸ್ತುತ ಪಕ್ಷದೊಳಗೆ ಉಂಟಾಗಿರುವ ಕೆಲವು ಆಂತರಿಕ ಮನಸ್ತಾಪಗಳು ಹಾಗೂ ಕಾರ್ಯಕರ್ತರನ್ನು ಕಡೆಗಣಿಸುವ ಧೋರಣೆಯಿಂ ದಾಗಿ ನನಗೆ ತುಂಬಾ ನೋವುಂಟಾಗಿದೆ. ಸ್ವಾಭಿಮಾನಕ್ಕೆ ಧಕ್ಕೆಯಾದ ಕಡೆ ಇರುವುದು ಸರಿಯಲ್ಲ ಎಂದು ಭಾವಿಸಿ ಸ್ವಇಚ್ಛೆಯಿಂ ದ ರಾಜೀನಾಮೆ ನೀಡುತ್ತಿದ್ದೇನೆ, ಎಂದು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಮಾನ್ವಿ ಭಾಗದಲ್ಲಿ ಸಕ್ರಿಯವಾಗಿ ಗುರುತಿಸಿ ಕೊಂಡಿದ್ದ ಇವರ ನಿರ್ಗಮನವು ಸ್ಥಳೀಯ ಜೆಡಿಎಸ್ ವಲಯದಲ್ಲಿ ಚರ್ಚೆಗೆ ದಾರಿ ಮಾಡಿಕೊಟ್ಟಿದೆ. ಮುಂಬರುವ ದಿನಗಳಲ್ಲಿ ಇವರು ಯಾವ ಪಕ್ಷ ಸೇರ್ಪಡೆಯಾಗಲಿದ್ದಾರೆ ಎಂಬುದು ಕಾದು ನೋಡಬೇಕಿದೆ.

ವಿಶ್ವಗುರು ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರರ ಜಯಂತಿ ಉತ್ಸವ

ಬಸವನಬಾಗೇವಾಡಿ: ಏ.18:

ಶ್ರೀ ಬಸವೇಶ್ವರರ ಜಯಂತಿಯ ಅಂಗವಾಗಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುವು ದಿನಾಂಕ 18 4 2026 ರಂದು ಶನಿವಾರ ಬೆಳಗ್ಗೆ 5:30 ಗಂಟೆಗೆ ಶಿವ ಭಜನೆ ಪ್ರಾರಂಭ 5:30 ರಿಂದ ರಾತ್ರಿ 10.30 ರವರೆಗೆ ಸ್ಥಳೀಯ ಕಲಾವಿದರಿಂದ ಉಪನ್ಯಾಸ ವಚನ ಗಾಯನ ಹಾಗೂ ವಚನ ರೂಪಕ ವಚನ ನೃತ್ಯ ನಡೆಯುವುದು ದಿನಾಂಕ 19 4 2026 ರವಿವಾರ ಸಾಯಂಕಾಲ 5:30 ರಿಂದ ರಾತ್ರಿ 10.30 ರವರೆಗೆ ವಚನ ಸಂಗೀತ ಶ್ರೀ ವೀರೇಶ್ ವಾಲಿ ಕುಮಾರಿ ಸಾಕ್ಷಿ ಹಿರೇಮಠ ಇವರ ನಡೆಸಿಕೊಡುವವರು ಅಂದಿನ ಉಪನ್ಯಾಸವನ್ನು ಡಾ ವೈ ಎಂ ಯಾಕೋಳ್ಳಿ ವಿಶ್ರಾಂತ ಪ್ರಾಚಾರ್ಯರು

ಹಾಗೂ ಸಾಹಿತಿಗಳು ಸಾಕಿನ್ ಸವದತ್ತಿ ವಿಷಯ ಪ್ರಸಾದ ಹಾಗೂ ಪ್ರಾಣ ಲಿಂಗಸ್ಥಳ ನಂತರ ವಚನ ರೂಪಕ ಮಯೂರಿ ನಾಟ್ಯ ಕಲಾ ಅಕಾಡೆಮಿ ಬಸವನ ಬಾಗೇವಾಡಿ ಇವರಿಂದ ಅಂದೆ ರಾತ್ರಿ 10:30ಕ್ಕೆ ಪ್ರಸಿದ್ಧ ಕಲಾವಿದರಿಂದ ಬಜನಾ ಪದಗಳು ಭಾಗ್ಯವಂತಿ ಬಜನಾ ಮಂಡಳ ನಗನೂರು ಮುಖ್ಯ ಗಾಯಕರು ದೀಪಾ ದೊಡ್ಡಮನಿ ಹಾಗೂ ಜ್ಯೋತಿ ದೊಡ್ಡಮನಿ



ಹಾಗೂ ಶ್ರೀ ಬಸವೇಶ್ವರ ಭಜನಾ ಮಂಡಳ ಪಡಚಿ ತಾಲೂಕ ಅಥಣಿ ಮುಖ್ಯ ಗಾಯಕರು ಶ್ರೀಮತಿ ಜಯಶ್ರೀ ಹಾಗೂ ಮಹಾನಂದ ಇವರಿಂದ ದಿನಾಂಕ 20 4 2026 ರಂದು ಸೋಮವಾರ ವಿಶೇಷ ಕಾರ್ಯಕ್ರಮಗಳು ಬೆಳಗ್ಗೆ 7:30 ಗಂಟೆಗೆ ಸ್ಥಳೀಯ ವಿರಕ್ತ ಮಠದ ಸಿದ್ದಲಿಂಗ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಷಟಸ್ಥಲ ಧ್ವಜಾರೋಹಣ ನಡೆಯುವುದು ಬೆಳಿಗ್ಗೆ 9:30 ಗಂಟೆಗೆ ಶ್ರೀ ಬಸವೇಶ್ವರ ಭಾವ 'ಚಿತ್ರದ ಮೆರವಣಿಗೆ ಬಸವೇಶ್ವರ ದೇವಸ್ಥಾನದಿಂದ ಬಸವ ಸ್ಮಾರಕದವರೆಗೆ ಬೆಳಗ್ಗೆ 10.30 ಗಂಟೆಗೆ ಬಸವೇಶ್ವರ ತೊಟ್ಟಿಲು ಉಸ್ತವ ಕಾರ್ಯಕ್ರಮ ಬಸವ ಸ್ಮಾರಕದಲ್ಲಿ ನಡೆಯುವುದು ಅಂದು ಮಧ್ಯಾಹ್ನ 12:30 ಗಂಟೆಗೆ ಮಹಾಪ್ರಸಾದ ವ್ಯವಸ್ಥೆಯನ್ನು ಬಸವೇಶ್ವರ ದೇವಸ್ಥಾನ ಹಾಗೂ ಬಸವ ಸ್ಮಾರಕದಲ್ಲಿ ಸಂಜೆ 5 ಗಂಟೆಗೆ ವಚನ ಚಿಂತನ ಕಾರ್ಯಕ್ರಮ ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸಿದ್ದಲಿಂಗ ಮಹಾಸ್ವಾಮಿಗಳು ಸಾನಿಧ್ಯವನ್ನು ಶ್ರೀ ಶಿವಪ್ರಕಾಶ ಶಿವಾಚಾರ್ಯರು ವಹಿಸಿ ಕೊಳ್ಳುವವರು ಕಾರ್ಯಕ್ರಮದ ಗಣ ಅಧ್ಯಕ್ಷತೆಯನ್ನು ಶ್ರೀ ಎಂ ಬಿ ಪಾಟೀಲ್ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಈ ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಶ್ರೀ ಶಿವಾನಂದ ಪಾಟೀಲ್ ಸಚಿವರು ವಹಿಸಿಕೊಳ್ಳುವರು ಮುಖ್ಯ ಅತಿಥಿಗಳು ರಾಜುಗೌಡ ಬ ಪಾಟೀಲ್ ಶಾಸಕರು

ದೇವರಹಿಪ್ಪರಗಿ ಮತಕ್ಷೇತ್ರ ವಿಶೇಷ ಆಹ್ವಾನಿತರು ಸ್ರಿ ಕೆ ಆನಂದ ಜಿಲ್ಲಾಧಿಕಾರಿಗಳು ಹಾಗೂ ಬಸವನಬಾಗವಾಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಶ್ರೀ ರಿಷಿ ಆನಂದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಬಸವನಬಾಗವಾಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಶ್ರೀ ಲಕ್ಷ್ಮಣ್ ನಿಂಬರಗಿ ಜಿಲ್ಲಾ ಪೊಲೀಸ್ ವರಿಷ್ಠ ಅಧಿಕಾರಿಗಳು ಶ್ರೀ ವೈ ಎಸ್ ಸೋಮನಕಟ್ಟಿ ದಂಡಾಧಿಕಾರಿಗಳು ಶ್ರೀ ಬಲ್ಲಪ್ಪ ನಂದಗಾವಿ ಡಿವೈಎಸ್ಪಿ ಬಸವನಬಾಗೇವಾಡಿ ಈ ಕಾರ್ಯಕ್ರಮದ ಉಪನ್ಯಾಸವನ್ನು ಡಾಟಿ ಎನ್ ವಾಸುದೇವಮೂರ್ತಿ ಪ್ರಾಧ್ಯಾಪಕರು ಆದಿಚುಂಚನಗಿರಿ ವಿಶ್ವವಿದ್ಯಾಲಯ ಮಂಡ್ಯ ವಿಷಯ ಶ್ರೀ ಬಸವೇಶ್ವರ ದೃಷ್ಟಿಕೋನದಲ್ಲಿ ಶರಣ ಹಾಗೂ ಐಕ್ಯ ಸ್ಥಳ ನಂತರ ವಚನ ಸಂಗೀತ ಶ್ರೀರಾಮು ಕಾಸರ ಸರಿಗಮ ಕಲಾವಿದರು ಹಾಗೂ ಜೀ ಕನ್ನಡ ಖ್ಯಾತ ಕಲಾವಿದರು ನಂತರ ವಚನ ನೃತ್ಯ ರೂಪಕ ನವ್ಯ ನಾಟ್ಯ ಸಂಘ ಬೆಂಗಳೂರು ಇವರಿಂದ ರಾತ್ರಿ 10.30 ಗಂಟೆಗೆ ಅಲಂಕೃತ ಶ್ರೀ ಬಸವೇಶ್ವರ ಪಲ್ಲಕ್ಕಿ ಹಾಗೂ ಬಸವೇಶ್ವರ ಭಾವಚಿತ್ರದ ಭವ್ಯ ಮೆರವಣಿಗೆ ಸಕಲ ಮಂಗಲ ವಾದ್ಯಗಳೊಂದಿಗೆ ಜರಗುವುದು ಎಲ್ಲಾ ಕಾರ್ಯಕ್ರಮಗಳ ದಿವ್ಯ ಸಾನಿಧ್ಯವನ್ನು ಸ್ಥಳೀಯ ವಿರಕ್ತ ಮಠದ ಶ್ರೀ ಮ ನಿ ಪ್ರ ಸಿದ್ದಿಂಗ ಮಹಾಸ್ವಾಮಿಗಳು ಸಾನಿಧ್ಯವನ್ನು ಶ್ರೀ ಷಟಸ್ಥಲ ಶಿವಪ್ರಕಾಶ ಶಿವಾಚಾರ್ಯ ಹಿರೇಮಠ ಬಸವನ ಬಾಗೇವಾಡಿ ಇವರು ವಹಿಸಿಕೊಳ್ಳುವರು ಕಾರಣ ಈ ಕಾರ್ಯಕ್ರಮದಲ್ಲಿ ಸರ್ವಭಕ್ತರು ಪಾ ಲ್ೊ್ಗ ಳ್'ಬೇ ಕೆಂ ದ'ು ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ಶ್ರೀ ಗುರುನಾಥ್ ದಡ್ಡಿ ತಿಳಿಸಿದ್ದಾರೆ.

ಕೆಲಸದ ವೇಳೆಯಲ್ಲಿ ಯುವಕ ಯುವತಿಯರಿಗೆ ಕಿರುಕುಳ :ಕ್ರಮಕ್ಕೆ ಒತ್ತಾಯಿಸಿ ಮನವಿ



ವಿಜಯಪುರ, ಏ. 18: ಕೆಲಸದ ಸ್ಥಳದಲ್ಲಿ ಹಿಂದು ಯುವಕ-ಯುವತಿಯರಿಗೆ ಕಿರುಕುಳ ಮತ್ತು ಬಲವಂತದ ಧಾರ್ಮಿಕ ಆಚರಣೆಗಳ ವಿರುದ್ಧ ಜಿಲ್ಲೆಯಲ್ಲಿಯೂ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ ಹಿಂದು ಮುಖಂಡರು ಜಿಲ್ಲಾಧಿಕಾರಿ ಮೂಲಕ ಶುಕ್ರವಾರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಮಹಾರಾಷ್ಟ್ರದ ನಾಶಿಕ್ ನಗರದಿಂದ ಪ್ರತಿಷ್ಠಿತ ಬಹುರಾಷ್ಟ್ರೀಯ ಖಿಅ ಕಂಪನಿಯಲ್ಲಿ ಇತ್ತೀಚೆಗೆ ಬಂದ ವರದಿಗಳು ಕೆಲಸದ ಸ್ಥಳಗಳಲ್ಲಿ ಕಿರುಕುಳ ಹಾಗೂ ಖ್ಯಾತ ಸಂಸ್ಥೆಗಳ ಒಳಗೆ ನಡೆಯುತ್ತಿರುವಂತೆ ಹೇಳಲಾಗಿರುವ ಬಲವಂತದ ಧಾರ್ಮಿಕ ಆಚರಣೆಗಳ ಕುರಿತು ಗಂಭೀರ ಆತಂಕವನ್ನು ಉಂಟು ಮಾಡಿವೆ. ಇಂತಹ ಘಟನೆಗಳು ನಡೆಯದಂತೆ ನಿರಂತರ ಎಚ್ಚರಿಕೆ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಅಗತ್ಯತೆ ಇದೆ. ವಿಜಯಪುರ ಜಿಲ್ಲೆಯಲ್ಲಿಯೂ ಇಂಥ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕು ಎಂದು ಹಿಂದೂ ಮುಖಂಡ ದಯಾಸಾಗರ ಪಾಟೀಲ್ ಸರ್ಕಾರವನ್ನು ಒತ್ತಾಯಿಸಿದರು.

ವಿಜಯಪುರ ಜಿಲ್ಲೆಯಲ್ಲಿ ವಿವಿಧ ಸಮುದಾಯಗಳು ಮತ್ತು ಹಿನ್ನೆಲೆಯಿಂದ ಬಂದ ಉದ್ಯೋಗಿಗಳನ್ನು ಹೊಂದಿರುವ ಅನೇಕ ಶಿಕ್ಷಣ ಸಂಸ್ಥೆಗಳು, ಆರೋಗ್ಯ ಸೇವಾ ಕೇಂದ್ರಗಳು, ತರಬೇತಿ ಸಂಸ್ಥೆಗಳು ಹಾಗೂ ಸಣ್ಣ ಕೈಗಾರಿಕೆಗಳಿವೆ. ಎಲ್ಲ ಉದ್ಯೋಗಿಗಳಿಗೆ ಸುರಕ್ಷಿತ, ಗೌರವಯುತ ಮತ್ತು ಕಾನೂನುಬದ್ಧ ಕೆಲಸದ ವಾತಾವರಣವನ್ನು ಖಚಿತಪಡಿಸುವುದು ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

ಈ ಹಿನ್ನೆಲೆಗಳಲ್ಲಿ, ಜಿಲ್ಲಾಡಳಿತವು ಕೆಲಸದ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ

ಮುಂತಾದ ಸರಿಯಾದ ನಿಗಾ ವ್ಯವಸ್ಥೆಯನ್ನು ಖಚಿತಪಡಿಸುವುದು,

ಉದ್ಯೋಗಿಗಳ ಹಕ್ಕುಗಳು ಹಾಗೂ ದೂರು ಪರಿಹಾರ ವ್ಯವಸ್ಥೆಗಳ ಕುರಿತು ಜಾಗೃತಿ ಮೂಡಿಸುವುದು,

ಕಿರುಕುಳ ಮತ್ತು ಯಾವುದೇ ಬಲವಂತದ ವಿರುದ್ಧ ಕಠಿಣ ನೀತಿಗಳನ್ನು ಸಂಸ್ಥೆಗಳು ಅ ಳ'ವ'ಡಿ ಸಿ ಕೊ ಳ್'ು ವ'ಂ ತೆ ಪ್ರೋತ್ಸಾ ಹಿಸುವುದು,

ಇಂತಹ ದೂರುಗಳ ಬಗ್ಗೆ ಸ್ಥಳೀಯ ಅಧಿಕಾರಿಗಳು ಎಚ್ಚರಿಕೆಯಿಂದ ಹಾಗೂ ತ್ವರಿತವಾಗಿ ಪ್'್ರ ತಿ ಕಿ್ರ ಯಿ ಂ ಸ'ು ವ' ಂ ತೆ ಸೂಚಿಸುವುದು,

ತ್ವರಿತವಾಗಿ ಸ್ಪಂದಿಸಲು ಸಹಾಯವಾಣಿ(ಊಟಔಟಟ) ಸಂಖ್ಯೆಯನ್ನು ಪ್ರಕಟಿಸುವದು.

ಈ ಕ್ರಮಗಳು ಸಮಾಜದಲ್ಲಿ ಸೌಹಾರ್ದತೆ ಕಾಪಾಡಲು, ವೈಯಕ್ತಿಕ ಸ್ವಾತಂತ್ರ್ಯಗಳನ್ನು ರಕ್ಷಿಸಲು ಮತ್ತು ಕಾನೂನು ಸುವ್ಯವಸ್ಥೆಯನ್ನು ಉಳಿಸಲು ಸಹಕಾರಿಯಾಗುತ್ತವೆ.

ಈ ವಿಷಯವನ್ನು ದಯವಿಟ್ಟು ಪರಿಗಣಿಸಿ, ಅಗತ್ಯವಾದ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಪಾಟೀಲ ವಿನಂತಿಸಿದರು.

ಶಾಂತಿ ನಗರ ಅರಣ್ಯದಲ್ಲಿ ಭಾರೀ ಬೆಂಕಿ 10 ಎಕರೆಗೂ ಹೆಚ್ಚು ಪ್ರದೇಶ ದಹನ



ಜಮಖಂಡಿ:ಏ.18:

ಬಾಗಲಕೋಟೆ ಜಿಲ್ಲೆ ಯ ಜಮಖಂಡಿ ತಾಲೂಕಿನ ಶಾಂತಿ ನಗರ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿದ್ದು, ಸುಮಾರು 10 ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ಬೆಂಕಿಗಾಹುತಿ ಯಾಗಿದೆ.

ಬೆಂಕಿಯ ಜ್ವಾಲೆಗಳು ವೇಗವಾಗಿ ವ್ಯಾಪಿಸಿಕೊಂಡು ದಟ್ಟ ಹೊಗೆ ಆವರಿಸಿರುವುದರಿಂದ ಸ್ಥಳೀಯರಲ್ಲಿ ಆತಂಕ ಮೂಡಿದೆ. ಅರಣ್ಯದಲ್ಲಿ ವಾಸಿಸುವ ಪಕ್ಷಿಗಳು ಮತ್ತು ಸಣ್ಣ ಪ್ರಾಣಿ ಗಳು ಸಂಕಷ್ಟಕ್ಕೊಳಗಾಗಿ ನರಳುತ್ತಿರುವ ದೃಶ್ಯಗಳು ಮನಕಲುಕುವಂತಿವೆ.

ಇದೇ ವೇಳೆ, ಘಟನೆ ನಡೆದಿದ್ದರೂ ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣ ಸ್ಥಳಕ್ಕೆ ಆಗಮಿಸದೇ ಇರುವುದಕ್ಕೆ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಬೆಂಕಿ ನಿಯಂತ್ರಣಕ್ಕೆ ತ'ಡ'ವಾ ಗ'ುತ್ತಿ ರ'ು ವ್ರು ದ'ು ಪರಿಸ್ಥಿತಿಯನ್ನು ಗಂಭೀರಗೊಳಿಸಿದೆ ಎಂಬ ಆರೋಪ ಕೇಳಿಬಂದಿದೆ.

ಕರ್ನಾಟಕದಲ್ಲಿ ಅರಣ್ಯ ಅಗ್ನಿ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆ, ತ್ವರಿತ ಕ್ರಮ ಅಗತ್ಯವೆಂದು ತಜ್ಞರು ಸೂಚಿಸಿದ್ದಾರೆ

ನಿಮ್ಮೂರು ಸುದ್ದಿ

ಸಂಪಾದಕೀಯ

ಅಮೆರಿಕಕ್ಕೆ ಮತ್ತಷ್ಟು 'ಕಹಿ ಸೋಲು' ಉಣಿಸಲು ಸಿದ್ಧ: ಇರಾನ್

ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ಸಂಘರ್ಷದ ನಡುವೆ ತನ್ನ ವಾಗ್ದಾಳಿಯನ್ನು ತೀವ್ರಗೊಳಿಸಿರುವ ಇರಾನ್, ಶತ್ರುಗಳಿಗೆ ಮತ್ತಷ್ಟು ಕಹಿ ಸೋಲುಗಳನ್ನು ಉಣಿಸಲು ನಮ್ಮ ನೌಕಾಪಡೆಯು ಸರ್ವಸನ್ನದ್ಧವಾಗಿದೆ ಎಂದು ಇರಾನ್‌ನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಎಚ್ಚರಿಕೆ ನೀಡಿದ್ದಾರೆ. ಜಾಗತಿಕ ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿಯನ್ನು ಇರಾನ್ ಸೇನೆಯು ಮುಚ್ಚಿದ ಬೆನ್ನಲ್ಲೇ ಈ ಕಠಿಣ ಎಚ್ಚರಿಕೆ ರವಾನೆಯಾಗಿದೆ ಎಂದು ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಏಪ್ರಿಲ್ 18ರಂದು ಇರಾನ್ ಸೇನಾ ದಿನದ ಅಂಗವಾಗಿ ಸಂದೇಶ ರವಾನಿಸಿರುವ ಖಮೇನಿ, ಇರಾನ್‌ನ ಸೇನಾ ಸಾಮರ್ಥ್ಯವನ್ನು ಶ್ಲಾಘಿಸಿದ್ದಾರೆ. ''ನಮ್ಮ ಡ್ರೋನ್‌ಗಳು ಅಮೆರಿಕ ಮತ್ತು ಇಸ್ರೇಲ್ ಮೇಲೆ ಸಿಡಿಲಿನಂತೆ ಎರಗಿದ ರೀತಿಯಲ್ಲೇ, ನಮ್ಮ ಕೆಚ್ಚೆದೆಯ ನೌಕಾಪಡೆಯು ಶತ್ರುಗಳಿಗೆ ಹೊಸ ಕಹಿ ಸೋಲುಗಳನ್ನು ಉಣಿಸಲು ಸಿದ್ಧವಾಗಿದೆ'' ಎಂದು ಅವರು ಗುಡುಗಿದ್ದಾರೆ.



ಹಾರ್ಮುಜ್ ಜಲಸಂಧಿಯ ಮೇಲೆ ಇರಾನ್ ಹಿಡಿತ ಸಾಧಿಸಲು ಮುಂದಾಗುತ್ತಿದ್ದಂತೆ, ಅಮೆರಿಕದ ಸೆಂಟ್ರಲ್ ಕಮಾಂಡ್ () ಪಡೆಗಳು ಇರಾನ್ ಬಂದರುಗಳು ಮತ್ತು ಕರಾವಳಿ ಪ್ರದೇಶಗಳನ್ನು ಪ್ರವೇಶಿಸುವ ಹಾಗೂ ನಿರ್ಗಮಿಸುವ ಹಡಗುಗಳ ಮೇಲೆ ಕಟ್ಟುನಿಟ್ಟಿನ ಕಡಲ ದಿಗ್ಬಂಧನವನ್ನು ಹೇರಿವೆ. ಈ ಬಿಗುವಿನ ವಾತಾವರಣದ ನಡುವೆಯೇ, ಜಲಸಂಧಿಯಿಂದ 20 ನಾಟಿಕಲ್ ಮೈಲಿ ದೂರದಲ್ಲಿ ತೈಲ ಟ್ಯಾಂಕರ್ ಒಂದರ ಮೇಲೆ ಇರಾನ್‌ನ ಬಂದೂಕು ದೋಣಿಗಳು ಗುಂಡಿನ ದಾಳಿ ನಡೆಸಿವೆ ಎಂದು ಬ್ರಿಟನ್‌ನ ಕಡಲ ವ್ಯಾಪಾರ ಕಾರ್ಯಾಚರಣೆ ಸಂಸ್ಥೆ () ವರದಿ ಮಾಡಿದೆ.

ಈ ಭೌಗೋಳಿಕ ರಾಜಕೀಯ ಬಿಕ್ಕಟ್ಟು ಜಾಗತಿಕ ಆರ್ಥಿಕತೆಯ ಮೇಲೆ, ವಿಶೇಷವಾಗಿ ತೈಲ ಮಾರುಕಟ್ಟೆಯ ಮೇಲೆ ತೀವ್ರ ಪರಿಣಾಮ ಬೀರಿದೆ. ವಾಣಿಜ್ಯ ಹಡಗುಗಳ ಸಂಚಾರಕ್ಕಾಗಿ ಜಲಸಂಧಿಯನ್ನು ಅಲ್ಪಾವಧಿಗೆ ತೆರೆಯಲಾಗಿತ್ತು ಎಂಬ ವರದಿಗಳ ಹಿನ್ನೆಲೆಯಲ್ಲಿ, ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 120 ಡಾಲರ್ ಗರಿಷ್ಠ ಮಟ್ಟದಿಂದ 90.38 ಡಾಲರ್‌ಗೆ ಇಳಿಕೆಯಾಗಿ ಕೊಂಚ ನಿರಾಳತೆ ಮೂಡಿಸಿತ್ತು. ಆದರೆ, ಇರಾನ್ ಸೇನೆಯು ಜಲಸಂಧಿಯನ್ನು ಮತ್ತೆ ಮುಚ್ಚಿರುವುದಾಗಿ ಘೋಷಿಸಿದ ಕಾರಣ ಮತ್ತು ಅಮೆರಿಕದ ದಿಗ್ಬಂಧನ ಮುಂದುವರಿದಿರುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಮತ್ತೆ ಅನಿಶ್ಚಿತತೆ ಮನೆಮಾಡಿದೆ.

ಒಂದೆಡೆ ಲೆಬನಾನ್ ಮತ್ತು ಇಸ್ರೇಲ್ ನಡುವೆ ಕದನ ವಿರಾಮ ಒಪ್ಪಂದ ಜಾರಿಯಲ್ಲಿದ್ದರೂ, ಇರಾನ್‌ನ ನೂತನ ಪರಮೋಚ್ಚ ನಾಯಕರಾಗಿರುವ ಮೊಜ್ತಬಾ ಖಮೇನಿ ಅವರ ಈ ಕಠಿಣ ನಿಲುವು ಪಶ್ಚಿಮ ಏಷ್ಯಾದಲ್ಲಿ ಯುದ್ಧದ ಕಾರ್ಮೋಡವನ್ನು ಇನ್ನಷ್ಟು ದಟ್ಟವಾಗಿಸಿದೆ.

ಅಮೆರಿಕದ ವಿನಾಶಕ್ಕೆ ಸಿದ್ಧವಾಗಿರುವ ಡೊನಾಲ್ಡ್ ಟ್ರಂಪ್ ಎಂಬ ವಿಧ್ವಂಸಕ

ಟ್ರಂಪ್ ಅವರ ಎರಡನೇ ಅವಧಿಯ ಆಡಳಿತ ಶೈಲಿ, ಮೊದಲನೆಯದಕ್ಕಿಂತ ಅತ್ಯಂತ ಅಪಾಯಕಾರಿಯಾಗಿದೆ. ಮಾಧ್ಯಮಗಳನ್ನು ಹತ್ತಿಕ್ಕುವುದು, ನ್ಯಾಯಾಂಗವನ್ನು ಅಸ್ತ್ರವಾಗಿಸುವುದು ಮತ್ತು ಸೇನೆಯನ್ನು ರಾಜಕೀಯಕ್ಕೆ ಬಳಸುವುದು ಈ ಪ್ರವೃತ್ತಿಯ ಭಾಗವಾಗಿದೆ. ವೈಜ್ಞಾನಿಕವಾಗಿ ಮುಂದುವರಿದ ಮತ್ತು ಅತ್ಯಂತ ಶ್ರೀಮಂತ ದೇಶ ಎಂಬ ಹಿರಿಮೆ ಹೊಂದಿದ್ದ ಅಮೆರಿಕದಂತಹ ದೇಶವು ಈ ರೀತಿಯಲ್ಲಿ ಆಂತರಿಕವಾಗಿ ಕುಸಿಯುತ್ತಿರುವುದು ಜಾಗತಿಕ ಜನತಂತ್ರದ ಭವಿಷ್ಯಕ್ಕೇ ದೊಡ್ಡ ಕಂಟಕವಾಗಿದೆ

ಇತಿಹಾಸದ ಗತಿಯನ್ನು ನಿರ್ಧರಿಸುವಲ್ಲಿ ವ್ಯಕ್ತಿಗಳ ಪಾತ್ರವೇನು ಎಂಬುದು ಸದಾ ಚರ್ಚೆಯ ವಿಷಯ. ಇತಿಹಾಸಕಾರ ಇ.ಎಚ್. ಕಾರ್ ಅವರು ವ್ಯಕ್ತಿ ಕೇಂದ್ರಿತ ಇತಿಹಾಸವನ್ನು ಲೇವಡಿ ಮಾಡಿದ್ದರೂ, ಕಾರ್ಲ್ ಮಾರ್ಕ್ಸ್ ಅವರು ''ವ್ಯಕ್ತಿಗಳು ಲಭ್ಯವಿರುವ ಸಂದರ್ಭಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಾರೆ'' ಎಂದಿದ್ದರು. ಆದರೆ, ಕೆಲವೊಮ್ಮೆ ಪ್ರಭಾವಿ ವ್ಯಕ್ತಿಗಳು ಇತಿಹಾಸದ ಹಾದಿಯನ್ನೇ ಬದಲಿಸಬಲ್ಲರು. ಲೆನಿನ್ ಇಲ್ಲದಿದ್ದರೆ ಸೋವಿಯತ್ ಒಕ್ಕೂಟ ಅಥವಾ ಹಿಟ್ಲರ್ ಇಲ್ಲದಿದ್ದರೆ ನಾಜಿ ಜರ್ಮನಿ ಇರುತ್ತಿರಲಿಲ್ಲ ಎಂಬ ಐತಿಹಾಸಿಕ ಸತ್ಯಗಳಂತೆಯೇ, ಇಂದು ಡೊನಾಲ್ಡ್ ಟ್ರಂಪ್ ಅಮೆರಿಕದ ಇತಿಹಾಸವನ್ನು ತಮ್ಮದೇ ಆದ ವಿನಾಶಕಾರಿ ಹಾದಿಗೆ ತಳ್ಳುತ್ತಿದ್ದಾರೆ ಎಂಬುದು ಕಳವಳಕಾರಿಯಾಗಿದೆ.

ಡೊನಾಲ್ಡ್ ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡು ಕೇವಲ ಒಂದು ವರ್ಷ ಮೂರು ತಿಂಗಳು ಕಳೆದಿದೆ. ಈ ಅಲ್ಪ ಅವಧಿಯಲ್ಲಿ ಅವರು ಅಮೆರಿಕವನ್ನು ಮತ್ತೆ ಶ್ರೇಷ್ಠ ದೇಶವನ್ನಾಗಿ ಮಾಡುವ ಭರವಸೆ ನೀಡಿದ್ದರೂ, ವಾಸ್ತವದಲ್ಲಿ ಆ ದೇಶದ ಭದ್ರ ಅಡಿಪಾಯವನ್ನೇ ಅಲ್ಲಾಡಿಸುತ್ತಿದ್ದಾರೆ. ಇಸ್ರೇಲ್ ಪ್ರಚೋದನೆಯಿಂದ ಇರಾನ್ ಮೇಲೆ ನಡೆಸುತ್ತಿರುವ ಯುದ್ಧವು ಪಶ್ಚಿಮ ಏಷ್ಯಾದಲ್ಲಿ ಸಾವು-ನೋವುಗಳಿಗೆ ಕಾರಣವಾಗಿರುವುದಲ್ಲದೆ, ಜಾಗತಿಕವಾಗಿ ತೈಲ, ಅನಿಲ ಹಾಗೂ ರಸಗೊಬ್ಬರ ಬೆಲೆಗಳ ಏರಿಕೆಗೆ ದಾರಿಯಾಗಿದೆ. ಇದರ ಜೊತೆಗೆ, ಅಮೆರಿಕದ ಆಂತರಿಕ ವ್ಯವಸ್ಥೆಗೆ ಅವರು ಮಾಡುತ್ತಿರುವ ಏಳು ಪ್ರಮುಖ ಹಾನಿಗಳು ಅಮೆರಿಕನ್ನರ ಭವಿಷ್ಯವನ್ನು ಮಂಕಾಗಿಸುತ್ತಿವೆ.

ಮೊದಲನೆಯದಾಗಿ, ಸರ್ಕಾರದ ನಿರ್ಧಾರ ತೆಗೆದುಕೊಳ್ಳುವ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನೇ ಬುಡಮೇಲು ಮಾಡಲಾಗಿದೆ. ಅಮೆರಿಕದ ಅಧ್ಯಕ್ಷರು ತಮ್ಮ ಸಂಪುಟ ಮತ್ತು ಕಾಂಗ್ರೆಸ್ ಜೊತೆ ಸಮಾಲೋಚನೆ ನಡೆಸಬೇಕಾದ್ದು ಸಾಂವಿಧಾನಿಕ ಆಶಯ. ಆದರೆ ಏಕಪಕ್ಷೀಯವಾಗಿ ಕಾರ್ಯನಿರ್ವಹಿಸುತ್ತಿರುವ ಟ್ರಂಪ್, ತಮ್ಮ ಎರಡನೇ ಅವಧಿಯ ಮೊದಲ ವರ್ಷದಲ್ಲೇ ದಾಖಲೆಯ 225 ಕಾರ್ಯನಿರ್ವಾಹಕ ಆದೇಶಗಳನ್ನು (ಎಕ್ಸಿಕ್ಯೂಟಿವ್ ಆರ್ಡರ್) ಹೊರಡಿಸಿದ್ದಾರೆ. ಇದರಲ್ಲಿ ವೆನೆಜುವೆಲಾ ಮತ್ತು ಇರಾನ್ ಮೇಲಿನ ಯುದ್ಧ ಘೋಷಣೆಯಂತಹ ಗಂಭೀರ ವಿಷಯಗಳ ಜೊತೆಗೆ, ಫೆಡರಲ್ ಸರ್ಕಾರದಲ್ಲಿ ವೋಕ್ ಎಐ ತಡೆಯುವುದು(ಟ್ರಂಪ್ ವಿರುದ್ಧ ಹೇಳುವ ಕೃತಕ ಬುದ್ಧಿಮತ್ತೆ () ಮಾದರಿಗಳನ್ನು ತಡೆಯುವ ಅಧಿಕೃತ ನೀತಿ) ಮತ್ತು ಟ್ರಕ್ ಚಾಲಕರಿಗಾಗಿ ಕಾಮನ್‌ಸೆನ್ಸ್ ನಿಯಮಗಳು(ಟ್ರಂಪ್ ಸರ್ಕಾರದಲ್ಲಿ ಟ್ರಕ್ ಚಾಲಕರು ಇಂಗ್ಲಿಷ್ ಭಾಷೆ ಚೆನ್ನಾಗಿ ತಿಳಿದಿರಬೇಕು) ಎಂಬಂತಹ ಹಾಸ್ಯಾಸ್ಪದ ಆದೇಶಗಳೂ ಸೇರಿವೆ.

ಎರಡನೆಯದಾಗಿ, ಅಮೆರಿಕದ ನ್ಯಾಯಾಂಗ ಇಲಾಖೆಯನ್ನು () ರಾಜಕೀಯ ಪ್ರತಿಸ್ಪರ್ಧಿಗಳನ್ನು ಪೀಡಿಸುವ ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ನಿಷ್ಠಾವಂತ ಅಧಿಕಾರಿಗಳ ಮೇಲೆ ಒತ್ತಡ ಹೇರುವುದು ಮತ್ತು ಡೆಮೋಕ್ರಾಟ್ ಪಕ್ಷದ ಆಡಳಿತವಿರುವ ರಾಜ್ಯಗಳಿಗೆ ಐಸಿಇ () ಏಜೆಂಟ್‌ಗಳನ್ನು



ಕಳುಹಿಸಿ ಸರ್ಕಾರದ ನೀತಿಯನ್ನು ವಿರೋಧಿಸುವ ನಾಗರಿಕರನ್ನು ಹೆದರಿಸುವ ತಂತ್ರಗಳು ನಿರಂತರವಾಗಿ ನಡೆಯುತ್ತಿವೆ. ನ್ಯಾಯ ಮತ್ತು ಸಮಾನತೆಯ ಬದಲು ಸೇಡು ಮತ್ತು ದ್ವೇಷದ ರಾಜಕಾರಣವೇ ಆಡಳಿತದ ಮೂಲಮಂತ್ರವಾಗಿ ಮಾರ್ಪಟ್ಟಿದೆ. ಆಡಳಿತ ಯಂತ್ರವು ಕೇವಲ ವೈಯಕ್ತಿಕ ನಿಷ್ಠೆಯನ್ನು ಮಾತ್ರ ಬೇಡುತ್ತಿರುವುದು ಆತಂಕಕಾರಿ.

ಮೂರನೆಯದಾಗಿ, ಅಮೆರಿಕದ ಹೆಮ್ಮೆಯ ಸೇನೆಯನ್ನು ಸಂಪೂರ್ಣವಾಗಿ ರಾಜಕೀಕರಣಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಸೇನೆಯು ಯಾವುದೇ ಪಕ್ಷ ಅಥವಾ ವ್ಯಕ್ತಿಗೆ ಸೀಮಿತವಾಗಬಾರದು ಎಂಬ ಸಂಪ್ರದಾಯವನ್ನು ಗಾಳಿಗೆ ತೂರಿ, ತಮ್ಮ ಹುಟ್ಟುಹಬ್ಬದಂದು ರಾಜಧಾನಿಯಲ್ಲಿ ಸೈನಿಕರ ಪರೇಡ್ ಆಯೋಜಿಸಲಾಗಿತ್ತು. ಅಲ್ಲದೆ, ಲಿಂಗ ಅಥವಾ ಜನಾಂಗೀಯ ತಾರತಮ್ಯವಿಲ್ಲದೆ ಬಡ್ತಿ ನೀಡಬೇಕೆಂದು ಪ್ರತಿಪಾದಿಸಿದ ಗೌರವಾನ್ವಿತ ಸೇನೆಯ ಮುಖ್ಯಸ್ಥರನ್ನು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಅವರ ಮೂಲಕ ಹುದ್ದೆಯಿಂದ ವಜಾಗೊಳಿಸಲಾಗಿದೆ. ಇದು ವಿಶ್ವದ ಅತ್ಯಂತ ಸುಸಜ್ಜಿತ ಸೇನೆಯ ಸಾಂಸ್ಥಿಕ ಶಕ್ತಿಯನ್ನು ಮತ್ತು ನೈತಿಕ ಸ್ಥೈರ್ಯವನ್ನು ಕುಂದಿಸುತ್ತಿದೆ.

ನಾಲ್ಕನೆಯ ಗಂಭೀರ ದಾಳಿ ಪತ್ರಿಕಾ ಸ್ವಾತಂತ್ರ್ಯದ ಮೇಲಾಗುತ್ತಿದೆ. ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯ ಮಾಲೀಕ ಜೆಫ್ ಬೆಜೋಸ್ ಅವರಂತಹ ಪ್ರಭಾವಿ ಉದ್ಯಮಿಗಳನ್ನು ಬೆದರಿಸಿ, ಆಡಳಿತದ ಪರವಾಗಿ ವರದಿ ಮಾಡುವಂತೆ ಒತ್ತಡ ಹೇರಲಾಗುತ್ತಿದೆ. ಮತ್ತೊಂದೆಡೆ, ಸಿಬಿಎಸ್ () ನಂತಹ ದೊಡ್ಡ ಮಾಧ್ಯಮ ಸಂಸ್ಥೆಗಳನ್ನು ಆಡಳಿತಕ್ಕೆ ಆಪ್ತರಾಗಿರುವ ಕೋಟ್ಯಧಿಪತಿಗಳು ಖರೀದಿಸುವಂತೆ ವ್ಯವಸ್ಥೆ ಮಾಡಿ, ಟೀಕಾತ್ಮಕ ವರದಿಗಳನ್ನು ಹತ್ತಿಕ್ಕಲಾಗುತ್ತಿದೆ. ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾದ ಮಾಧ್ಯಮವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ವಾಸ್ತವವನ್ನು ಮರೆಮಾಚುವ ಪ್ರಯತ್ನಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ.

ಐದನೆಯದಾಗಿ, ಅಮೆರಿಕದ ಜಾಗತಿಕ ಶಕ್ತಿಯ ಮೂಲವಾದ ವಿಶ್ವವಿದ್ಯಾಲಯಗಳು ಮತ್ತು ವೈಜ್ಞಾನಿಕ ವಲಯದ ಮೇಲೆ ನಿರಂತರ ಪ್ರಹಾರ ನಡೆಯುತ್ತಿದೆ. ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ಕೃತ್ಯಗಳ ವಿರುದ್ಧ ಶಾಂತಿಯುತ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರ ಮೇಲೆ ಆಕ್ರೋಶ ವ್ಯಕ್ತಪಡಿಸಿ, ವಿಶ್ವವಿದ್ಯಾಲಯಗಳಿಗೆ ನೀಡುವ ಫೆಡರಲ್ ಅನುದಾನ ಕಡಿತಗೊಳಿಸುವ ಮತ್ತು ನಿಧಿಗಳ ಮೇಲೆ ತೆರಿಗೆ ವಿಧಿಸುವ ಬೆದರಿಕೆ ಹಾಕಲಾಗಿದೆ.

ಆರನೆಯದಾಗಿ, ಅಮೆರಿಕದ ನಂಬಿಕಸ್ಥ ಮಿತ್ರರಾಷ್ಟ್ರಗಳ ಜೊತೆಗಿನ ಅಂತಾರಾಷ್ಟ್ರೀಯ ಸಂಬಂಧಗಳು ಹದಗೆಡುತ್ತಿವೆ. ಉತ್ತಮ ಬಾಂಧವ್ಯವಿದ್ದ ನೆರೆಯ ಕೆನಡಾ ದೇಶದ ಮೇಲೆ ವ್ಯಾಪಾರ ಯುದ್ಧದ ಬೆದರಿಕೆ ಹಾಕಿರುವುದು ಹಾಗೂ ಅಲ್ಲಿನ ಪ್ರಧಾನಿಯನ್ನು ಅಮೆರಿಕದ 51ನೇ ಗವರ್ನರ್ ಎಂದು ಲೇವಡಿ ಮಾಡಿರುವುದು ರಾಜತಾಂತ್ರಿಕ ಸಂಬಂಧಗಳಿಗೆ ಧಕ್ಕೆ ತಂದಿದೆ. ನ್ಯಾಟೋ ಒಕ್ಕೂಟದ ಬಗೆಗಿನ ತಾತ್ಸಾರ, ಗ್ರೀನ್‌ಲ್ಯಾಂಡ್ ಖರೀದಿಸುವ ಹಠ, ಇರಾನ್ ಯುದ್ಧಕ್ಕೆ ಬೆಂಬಲ ನೀಡದ ಯುರೋಪಿಯನ್ ರಾಷ್ಟ್ರಗಳ ವಿರುದ್ಧದ ದ್ವೇಷ ಹಾಗೂ ಬ್ರಿಟನ್ ಮತ್ತು ಸ್ಪೇನ್ ಪ್ರಧಾನಿಗಳನ್ನು ವೈಯಕ್ತಿಕವಾಗಿ ನಿಂದಿಸಿರುವುದು ಅಮೆರಿಕವನ್ನು ಜಾಗತಿಕವಾಗಿ ಒಂಟಿಯಾಗಿಸುತ್ತಿದೆ.

ಏಳನೆಯ ಮತ್ತು ಅತ್ಯಂತ ಕಳವಳಕಾರಿ ಅಂಶವೆಂದರೆ, ಅಧ್ಯಕ್ಷೀಯ ಹುದ್ದೆಯ ಘನತೆಯನ್ನೇ ಮಣ್ಣುಪಾಲು ಮಾಡುತ್ತಿರುವುದು. ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಬಳಸುತ್ತಿರುವ ಅಸಭ್ಯ ಭಾಷೆ, ಹಾಗೂ ತಮ್ಮ ಕುಟುಂಬ ಮತ್ತು ಆಪ್ತರ ಆರ್ಥಿಕ ಲಾಭಕ್ಕಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ರೀತಿ ಹಿಂದೆಂದೂ ಕಂಡಿರದಂತಹದ್ದು. ಈ ಹಿಂದೆ ಲಿಂಡನ್ ಜಾನ್ಸನ್ ಅಥವಾ ರಿಚರ್ಡ್ ನಿಕ್ಸನ್ ಅವರಂತಹ ಅಧ್ಯಕ್ಷರ ಮೇಲೂ ಆರೋಪಗಳಿದ್ದರೂ, ಪ್ರಸ್ತುತ ಆಡಳಿತವು ಅಧಿಕಾರದಲ್ಲಿರುವಾಗಲೇ ಭ್ರಷ್ಟಾಚಾರ ಮತ್ತು ಅಸಭ್ಯತೆಯನ್ನು ಅತ್ಯಂತ ಬಹಿರಂಗವಾಗಿ ಪ್ರದರ್ಶಿಸುತ್ತಿದೆ.

ಟ್ರಂಪ್ ಅವರ ಮೊದಲ ಅವಧಿಗಿಂತಲೂ ಎರಡನೇ ಅವಧಿಯ ಆಡಳಿತ ಶೈಲಿಯು ಅತ್ಯಂತ ಅಪಾಯಕಾರಿಯಾಗಿದೆ. ಜಾಗತಿಕ ಮಟ್ಟದಲ್ಲಿ ಸರ್ವಾಧಿಕಾರಿ ರೀತಿಯ ಧೋರಣೆಯುಳ್ಳ ನಾಯಕರಾದ ಹಂಗೇರಿಯ ವಿಕ್ಟರ್ ಓರ್ಬನ್, ಟರ್ಕಿಯ ಎರ್ಡೋಗನ್, ಇಸ್ರೇಲ್‌ನ ನೆತನ್ಯಾಹು ಮತ್ತು ಭಾರತದ ನರೇಂದ್ರ ಮೋದಿ ಅವರ ಆಡಳಿತ ತಂತ್ರಗಳನ್ನು ಅನುಸರಿಸುತ್ತಿರುವ ಲಕ್ಷಣಗಳು ಇಲ್ಲಿ ದಟ್ಟವಾಗಿವೆ. ಮಾಧ್ಯಮಗಳನ್ನು ಹತ್ತಿಕ್ಕುವುದು, ನ್ಯಾಯಾಂಗವನ್ನು ಅಸ್ತ್ರವಾಗಿಸುವುದು ಮತ್ತು ಸೇನೆಯನ್ನು ರಾಜಕೀಯಕ್ಕೆ ಬಳಸುವುದು ಈ ಪ್ರವೃತ್ತಿಯ ಭಾಗವಾಗಿದೆ. ವೈಜ್ಞಾನಿಕವಾಗಿ ಮುಂದುವರಿದ ಮತ್ತು ಅತ್ಯಂತ ಶ್ರೀಮಂತ ದೇಶ ಎಂಬ ಹಿರಿಮೆ ಹೊಂದಿದ್ದ ಅಮೆರಿಕದಂತಹ ದೇಶವು ಈ ರೀತಿಯಲ್ಲಿ ಆಂತರಿಕವಾಗಿ ಕುಸಿಯುತ್ತಿರುವುದು ಜಾಗತಿಕ ಪ್ರಜಾಪ್ರಭುತ್ವದ ಭವಿಷ್ಯಕ್ಕೇ ದೊಡ್ಡ ಕಂಟಕವಾಗಿದೆ.

ಸರಣಿ ಸರಣಿ ಅಪಘಾತ: ರಸ್ತೆ ಅಗಲಿಕರಣಕ್ಕೆ ಸಚಿನ್ ಕುಮಾರ ನಾಯಕ ಆಗ್ರಹ

'ರಪುರ

ಸುರಪುರ ತಾಲೂಕಿನ ತಿಂಥಣಿ ಗ್ರಾಮದ ಸಮೀಪದ ಶಾಂತಪುರ ಕ್ರಾಸ್ ಬಳಿ ಏ.17, 2026ರಂದು ಸಂಭವಿಸಿದ ಭೀಕರ ಅಪಘಾತದಲ್ಲಿ ಆರು ಮಂದಿ ಸಜೀವ ದಹನವಾಗಿರುವ ಘಟನೆ ರಾಜ್ಯದ ಜನರನ್ನು ಬೆಚ್ಚಿಬಿಳಿಸಿದೆ. ಇದೇ ಭಾಗದಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಂಭವಿಸುತ್ತಿರುವ ಸರಣಿ ಸರಣಿ ಅಪಘಾತಗಳು ಸಂಭವಿಸುವದರಿಂದ ಸಾರ್ವಜನಿಕರಲ್ಲಿ ತೀವ್ರ ಆತಂಕ ಮೂಡಿಸಿವೆ.

ಕಳೆದ ಒಂದು ವರ್ಷದ ಹಿಂದೆ ಬಸ್ ಮತ್ತು ಬೈಕ್ ಮುಖಾಮುಖಿ ಸಂಭವಿಸಿ ಶಹಾಪೂರ ಮೂಲದ ಐದು ಮಂದಿ ಸಾವನ್ನಪ್ಪಿದ್ದರು.

ಇತ್ತೀಚೆಗೆ, ಒಂದು ವಾರದ ಹಿಂದೆ ನಗರ ನಿವಾಸಿಯೊಬ್ಬರು ಅಪಘಾತದಲ್ಲಿ ಮೃತಪಟ್ಟಿದ್ದರು.

ಇದೇ ವೇಳೆ, ಹತ್ತಿಗೂಡುರ ಸಮೀಪದಲ್ಲಿ ಮೂರರಿಂದ ನಾಲ್ಕು ತಿಂಗಳ ಹಿಂದೆ ವಿಆರ್‌ಎಲ್ ಬಸ್ ಉರುಳಿ ಬೆಂಕಿ ಹೊತ್ತಿಕೊಂಡಿರುವ ಪರಿಣಾಮ 3/4 ಮಂದಿ ಅಸುನೀಗಿದ್ದರು.. ದೇವಪುರ ನಿವಾಸಿ ಕೂಡ ದೇವಪುರ ಹಳ್ಳದ ಪಕ್ಕ ಆಟೋ ಮತ್ತು ಕ್ರಾಸರ ಡಿಕ್ಕಿ ಹೊಡೆದು 4 ಸಂಭವಿಸಿದವು



ಒಂದೂವರೆ ವರ್ಷದ ಹಿಂದೆ ಲಾರಿ ಅಪಘಾತ ಸಂಭವಿಸಿತ್ತು.

2/3 ವರ್ಷಗಳ ಹಿಂದೆ ಕೊಂಗಂಡಿ ಬ್ರಿಜ್ ಬಳಿ ಲಾರಿ-ಕಾರ್ ಮುಖಾಮುಖಿಯಲ್ಲಿ 2/3 ಮಂದಿ ಸಾವನ್ನಪ್ಪಿದ ಘಟನೆಗಳೂ ಜನರ ನೆನಪಿನಲ್ಲಿ ಇನ್ನೂ ತಾಜಾಗಿವೆ.

ಹಾಗೆಯೇ ಲಕ್ಷ್ಮೀಪೂರ ಸೇತುವೆ ಬಳಿ ಎರಡು ವರ್ಷಗಳ ಹಿಂದೆ ಲಾರಿ-ಬೈಕ್ ಅಪಘಾತದಲ್ಲಿ ಅತಿಥಿ ಉಪನ್ಯಾಸಕ ಮಲ್ಲಿಕಾರ್ಜುನ ಅವರು ಮೃತಪಟ್ಟಿದ್ದರು.

ಹತ್ತಿಗೂಡುರ ಟು ಲಿಂಗಸೂರು ರಸ್ತೆಯಲ್ಲಿ ವಾರಕ್ಕೊಮ್ಮೆ ಆದರೂ ಅಪಘಾತ ಸಂಭವಿಸುವುದು ಸಾಮಾನ್ಯವಾಗಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಘಟನೆಗಳು ರಸ್ತೆ ಸುರಕ್ಷತೆ ಕುರಿತು ಗಂಭೀರ ಪ್ರಶ್ನೆಗಳನ್ನು ಎಬ್ಬಿಸುತ್ತಿವೆ.

ಅಪಘಾತ ಮತ್ತು ಟ್ರಾಫಿಕ್ ತಪ್ಪಿಸಲು ಬೆಂಗಳೂರಿನಂತಹ ಮಹಾನಗರ ಪ್ರದೇಶಗಳಲ್ಲಿ ಫ್ಲೈಓವರ್, ಮೆಟ್ರೋ, ಅಂಡರ್‌ಪಾಸ್ ಯೋಜನೆಗಳನ್ನು ಕೈಗೊಳ್ಳುತ್ತಿರುವ ಸರ್ಕಾರ, ಹಿಂದುಳಿದ ಪ್ರದೇಶಗಳಲ್ಲಿ ರಸ್ತೆ ಅಗಲಿಕರಣದ ಕಡೆ ನಿರ್ಲಕ್ಷ್ಯ ವಹಿಸುತ್ತಿರುವುದು ಕಂಡುಬರುತ್ತದೆ

ದಕ್ಷಿಣ ಕರ್ನಾಟಕದ ಭಾಗಗಳಲ್ಲಿ ಇಂತಹ ಸಮಸ್ಯೆಗಳು ಎದುರಾದಾಗ ಸಾರ್ವಜನಿಕರು ಸಂಘಟಿತವಾಗಿ ಪ್ರತಿಭಟನೆ ನಡೆಸಿ ಕಾಮಗಾರಿಗಳನ್ನು ಪ್ರಾರಂಭಿಸುವಂತೆ ಮಾಡುತ್ತಾರೆ. ಆದರೆ ಈ ಭಾಗದಲ್ಲಿ ಪ್ರತಿಭಟನೆಗಳ ಕೊರತೆ ಕಂಡು ಬರುತ್ತಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಹತ್ತಿಗೂಡುರ, ಕೊಂಗಂಡಿ, ಲಕ್ಷ್ಮೀಪೂರ, ದೇವಾಪೂರ, ಗೊಲಪಲ್ಲಿ, ತಿಂಥಣಿ ಸೇರಿದಂತೆ ಅಪಾಯಕರ ಪ್ರದೇಶಗಳ ಸೇತುವೆಗಳು ಹಾಗೂ ಕಿರಿದಾದ ರಸ್ತೆಯನ್ನು ತುರ್ತಾಗಿ ಅಗಲಿಕರಣ ಮಾಡಬೇಕು ಎಂದು ಕರವೇ ಸ್ವಾಭಿಮಾನಿ ಬಣ ತಾಲೂಕು ಅಧ್ಯಕ್ಷ ಸಚಿನ್ ಕುಮಾರ ನಾಯಕ ಒತ್ತಾಯಿಸಿದ್ದಾರೆ.

100 ಕ್ಕೂ ಹೆಚ್ಚು ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ

ರಾಯಚೂರು:ಏ.18- ತಾಲೂಕಿನ ಬಾಯದೊಡ್ಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ವಡವಾಟಿ ಗ್ರಾಮದ ವಾಕೀಟಿ ಜಂಬಣ್ಣ ಅವರ ನೇತೃತ್ವದಲ್ಲಿ ವಡವಾಟ್ಟಿ ಗ್ರಾಮದ ನೂರಕ್ಕೂ ಹೆಚ್ಚು ಕಾರ್ಯಕರ್ತರು ನಗರ ವಿಧಾನಸಭಾ ಕ್ಷೇತ್ರದ ನಗರ ಬ್ಲಾಕ್ ಅಧ್ಯಕ್ಷರಾದ ಶ್ರೀನಿವಾಸ್ ರೆಡ್ಡಿ ಅವರನ್ನು ಬೇಟಿಯಾದರು. ನಂತರ ಗ್ರಾಮದಲ್ಲಿ ಉದ್ಭವಿಸಿರುವ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸಿದರು. ಸಮಸ್ಯೆಗಳಿಗೆ ಸ್ಪಂದಿಸಿದ ಅವರು ವಡವಾಟ್ಟಿ ಗ್ರಾಮದ ಸಮಸ್ಯೆಗಳನ್ನು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವರಾದ ಎನ್. ಎಸ್. ಬೊಸರಾಜು ಸಾಹೇಬರೊಂದಿಗೆ ಚರ್ಚಿಸಿ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಎಂದು ಬರವಸೆ ನೀಡಿದರು.



ಗ್ರಾಮಾಭಿವೃದ್ಧಿ ಗೆ ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ಹೆಚ್ಚು ಒತ್ತು ನೀಡಲಾಗುವುದು ಎಂದು ತಿಳಿಸಿದರು. ಪಕ್ಷದ ತತ್ವ ಸಿದ್ಧಾಂತಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಗ್ರಾಮಸ್ಥರು ಮತ್ತು ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾಗಿದ್ದು ಸ್ಥಳೀಯ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಇದೆ ವೇಳೆ ಗ್ರಾಮದ ನೂರಕ್ಕೂ ಹೆಚ್ಚು ಕರ್ಯಕರ್ತರನ್ನು ಶ್ರೀನಿವಾಸ್ ರೆಡ್ಡಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ವಾಕೀಟಿ ಜಂಬಣ್ಣ. ಬಿ.ಜಿ. ಅಂಜನೇಯ ವಡವಾಟ್ಟಿ. ನರಸಿಂಹಲು, ತಯಪ್ಪ ಗುಪ್ಪೇಶ್. ಸಲಿ ತಿಮ್ಮಪ್ಪ, ತೇಲು ತಿಮ್ಮಪ್ಪ. ಬಡಲು ತಿಮ್ಮಪ್ಪ, ಟೊಂಗು ಮಾರೆಪ್ಪ, ಟೆಂಕಾಯಿಲು ತಿಮ್ಮಪ್ಪ, ಬುಡ್ಡ ಬಜಾರಪ್ಪ, ಬೊಳಬಂಡ್ಡಿ, ಸಂತೋಷ, ಜಮವಂತ, ನಲ್ಲನ್ನ, ಇತರರು ಉಪಸ್ಥಿತರಿದ್ದರು.

ನಮಗೆ ನಿಮ್ಮ ವಂದನೆ ಬೇಡ, ಅಧಿಕಾರ ಕೊಡಿ

ನಮಗೆ ನಿಮ್ಮ ಈ ವಂದನೆ ಸಾಕಾಗಿದೆ. ಈಗ ಈ ನಾಟಕಗಳನ್ನು ಬಿಡಿ. ಯಾರು ವಂದನೆ ಮಾಡುತ್ತಿದ್ದಾರೆ, ಮಾಡಿಸುತ್ತಿದ್ದಾರೆ. ಅವರ ಹೆಸರುಗಳು ಎಪ್ಸ್ಟೀನ್ ಫೈಲ್‌ಗಳಲ್ಲಿ ಬರುತ್ತಿವೆ ಅಥವಾ ಈಗಾಗಲೇ ಬಂದಿವೆ. ದೇಶೀ ಎಪ್ಸ್ಟೀನ್ ಫೈಲ್‌ಗಳೂ ಅವರ ಮುಂದೆ ತೆರೆಯಲ್ಪಟ್ಟಿವೆ.

ಸರ್ಕಾರದ ಲಾಜಿಕ್ ಹೀಗಿದೆ: ಜನಗಣತಿ ಮುಗಿಯಬೇಕು. ಅದರ ಆಧಾರದ ಮೇಲೆ ಕ್ಷೇತ್ರಗಳನ್ನು ಮರು ವಿನ್ಯಾಸಗೊಳಿಸಬೇಕು. ನಂತರವೇ 33% ಮಹಿಳಾ ಮೀಸಲಾತಿ ಜಾರಿಗೆ ಬರಬೇಕು. ಆದರೆ ಮೀಸಲಾತಿಯನ್ನು ಇಂದಿನ ಕ್ಷೇತ್ರಗಳಲ್ಲಿಯೇ ಜಾರಿಗೊಳಿಸಬಹುದು ಎಂಬುದಕ್ಕೆ ಇವರಲ್ಲಿ ಉತ್ತರವಿಲ್ಲ.

2023ರಲ್ಲಿ ಮಸೂದೆ ಅಂಗೀಕಾರಗೊಂಡು ಕಾಯ್ದೆಯೂ ಆಗಿದೆ. ಅದು ಜಾರಿಯಾಗಲು ಜನಗಣತಿ ನಡೆಯಬೇಕು. ಅಥವಾ ಲೋಕಸಭಾ ಕ್ಷೇತ್ರ ಪುನರ್‌ವಿಂಗಡಣೆ ಒಂದು ಪ್ರತ್ಯೇಕ ಪ್ರಕ್ರಿಯೆ, ಅದು ಅಧಿಕಾರದ ಹಂಚಿಕೆಯನ್ನು ಮರು ಸಮೀಕರಿಸುತ್ತದೆ. ಈ ಎರಡನ್ನು ಕಟ್ಟಿ ಹಾಕುವುದು ಎಲ್ಲಿಯ ನ್ಯಾಯ? ಇದು ಕೇವಲ ವಿಳಂಬ ಮಾಡುವ ಸುಲಭ ಮಾರ್ಗ ಅಂದರೆ, ''ಹಕ್ಕಿಗೆ ಒಂದು ಹೊಸ ಷರತ್ತು ಸೇರಿಸಿ, ಅದನ್ನು ಭವಿಷ್ಯಕ್ಕೆ ತಳ್ಳುವುದು.''

ಸರಳವಾಗಿ ಹೇಳುವುದಾದರೆ ಹೌದು, ಇದು ವಿಳಂಬದ ಮೂಲಕ ಅನ್ಯಾಯ.

ಯಾಕೆಂದರೆ: ಮಹಿಳೆಯರ ಪ್ರತಿನಿಧಿತ್ವ ಈಗಲೇ ಕಡಿಮೆ ಇದೆ. ಅದನ್ನು ತಕ್ಷಣ ಸರಿಪಡಿಸಬಹುದಾದ ಅವಕಾಶ ಇರುವಾಗ, ಅದನ್ನು ಮುಂದೂಡಲಾಗಿದೆ. ರಾಜಕೀಯ ಇಚ್ಛಾಶಕ್ತಿ ಇದ್ದರೆ, ಪಕ್ಷಗಳು ಈಗಲೇ ಹೆಚ್ಚಿನ ಮಹಿಳಾ ಅಭ್ಯರ್ಥಿಗಳನ್ನು ನಿಲ್ಲಿಸಬಹುದು. ಕೇವಲ ಮಹಿಳಾ ಮೀಸಲಾತಿಯ ವಿಷಯವನ್ನು ಭಾವನಾತ್ಮಕ ಸಂಗತಿಯಾಗಿಸಿ, ಕಣ್ಣೀರು ಸುರಿಸಿ ಮತ ಬಾಚಿಕೊಳ್ಳುವ ಹುನ್ನಾರ ಮಾತ್ರ. ಇದೇ



ಪಕ್ಷದ ಮಹಿಳೆಯರು ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿದ್ದಾರೆ. ಜನರನ್ನು ಹಾದಿ ತಪ್ಪಿಸಲು, ತಪ್ಪು ಸಂದೇಶ ರವಾನಿಸಲು! ಇದಕ್ಕಿಂತ ನಾಚಿಕೆಗೇಡಿನ ವಿಷಯವೇನಿದೆ?

ಇನ್ನು ಈ ವಂದನ ಎಂಬ ಪದ ನಾಟಕೀಯ ಎನಿಸುತ್ತದೆ. ಸ್ತ್ರೀಯರಿಗೆ ಅವರ ನ್ಯಾಯಸಮ್ಮತ ಹಕ್ಕನ್ನು ಸಂಸತ್ತು ನೀಡುತ್ತಿದೆ ಅದೂ ದಶಕಗಳ ವಿಳಂಬದ ಬಳಿಕ! ಮಹಿಳೆಯರಿಗೆ ಪುರುಷರ ವಂದನೆಯ ಅಗತ್ಯವಿಲ್ಲ. ಹಿಂದಿನ ಕಾಲದ ಕವಿಗಳು ಮಹನೀಯರು ಸಾಕಷ್ಟು ವಂದನೆಗಳನ್ನು ಮಾಡಿದ್ದಾರೆ; ಆದರೂ ಇಂದಿನ ಸಮಾಜದಲ್ಲಿ ಸ್ತ್ರೀಯರ ಸ್ಥಿತಿ ಏನು? ಅತ್ಯಾಚಾರಗಳ ಸಂಖ್ಯೆ ನಿರಂತರವಾಗಿ ಏರುತ್ತಲೇ ಇದೆ. ಒಂದು ವರ್ಷದ ಮಗುವಿನಿಂದ, ನಾಲ್ಕು ವರ್ಷದ ಬಾಲಕಿಯರ ಮೇಲೂ ಅತ್ಯಾಚಾರ ಮತ್ತು ಹತ್ಯೆಗಳು ನಡೆಯುತ್ತಿವೆ. ಧರ್ಮ ಮತ್ತು ಅಧ್ಯಾತ್ಮದ ಹೆಸರಿನಲ್ಲಿ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಯುತ್ತಿದೆ; ಅತ್ಯಾಚಾರಿ, ಬಲಾತ್ಕಾರಿಗಳಿಗೆ ಪಕ್ಷದ ಟಿಕೆಟ್ ಸಿಗುತ್ತವೆ. ಚುನಾಯಿತರಾಗಿ ಸಂಸತ್ತಿನಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಇಂತಹವರು ಸರ್ಕಾರದ ಪೋಷಣೆ ಮತ್ತು ಆಶ್ರಯದಲ್ಲಿ ಬೆಳೆದು, ಬೇಕಾದಾಗ ಪೆರೋಲ್ ಮೇಲೆ ಬಿಡುಗಡೆಯಾಗುತ್ತಿದ್ದಾರೆ. ಅತ್ಯಾಚಾರಿಗಳು ಮತ್ತು ಹಂತಕರಿಗೆ ಬಹಿರಂಗವಾಗಿ ಬೆಂಬಲ ನೀಡಲಾಗುತ್ತಿದೆ; ಹೂಮಾಲೆ ಹಾಕಿ ಸಮ್ಮಾನಿಸಲಾಗುತ್ತದೆ? ಇಂತಹ ಸಂದರ್ಭದಲ್ಲೂ ನೀವು ''ನಾರಿ ಶಕ್ತಿ ವಂದನ'' ಮಾಡುತ್ತಾ ನಿಮ್ಮ ಪಾಪಗಳ ಮೇಲೆ ಪರದೆ ಹಾಕಲು ಯತ್ನಿಸುತ್ತಿಲ್ಲವೇ!

ನಮಗೆ ನಿಮ್ಮ ಈ ವಂದನೆ ಸಾಕಾಗಿದೆ. ಈಗ ಈ ನಾಟಕಗಳನ್ನು ಬಿಡಿ. ಯಾರು ವಂದನೆ ಮಾಡುತ್ತಿದ್ದಾರೆ, ಮಾಡಿಸುತ್ತಿದ್ದಾರೆ ಅವರ ಹೆಸರುಗಳು ಎಪ್ಸ್ಟೀನ್ ಫೈಲ್‌ಗಳಲ್ಲಿ ಬರುತ್ತಿವೆ ಅಥವಾ ಈಗಾಗಲೇ ಬಂದಿವೆ. ದೇಶೀ ಎಪ್ಸ್ಟೀನ್ ಫೈಲ್‌ಗಳೂ ಅವರ ಮುಂದೆ ತೆರೆಯಲ್ಪಟ್ಟಿವೆ.

ಬೇಕಾದರೆ ದೇವ-ದೇವತೆಗಳ ವಂದನೆ ಮಾಡಿಕೊಳ್ಳಿ, ಅದರಲ್ಲಿ ಯಾರಿಗೂ ತೊಂದರೆಯಿಲ್ಲ. ಆದರೆ ಸ್ತ್ರೀಯರನ್ನು ಈ ವಂದನೆಯ ಭಾರದಿಂದ ಮುಕ್ತಗೊಳಿಸಿ. ಮಹಿಳಾ ಮೀಸಲಾತಿ ಎಂದರೆ ಅವರ ವಂದನೆ ಅಲ್ಲ; ಅದು ಅವರ ರಾಜಕೀಯ ಪಾಲುದಾರಿಕೆಯನ್ನು ಒಪ್ಪಿಕೊಳ್ಳುವಿಕೆ ಮತ್ತು ಮಾನ್ಯತೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR